ನಿತ್ಯ ವ್ಯವಹಾರ ಯಜ್ಞ ನಿರ್ವಾಹಕ್ಕೆ ವ್ಯಕ್ತಿಗಳು ತಮ್ಮಿಷ್ಟಕ್ಕೆ ಸಹಕಾರಿಯಾಗಿರುವುದನ್ನು 'ದೇವ'ವೆಂದೂ ಬೇರೆಯಾದುದನ್ನು ಅಸುರವೆಂದೂ ವಿಷವನ್ನು ಅಮೃತವೆಂದೂ ಅಮೃತವನ್ನು ವಿಷವೆಂದೂ ಭಾವಿಸಬಹುದು. ಆದರೆ ಋತಕ್ಕೆ ಅನುಗುಣವಾಗಿರುವ ವಿಚಾರವನ್ನು ರಾಜನೀತಿಯಿಂದ ತಿಳಿಯಬೇಕು ಒಂದು ವಿಷವನ್ನು ಮತ್ತೊಂದು ವಿಷದಿಂದಲೇ ಪರಿಹರಿಸಬೇಕೆಂಬುದೂ ಸ್ವತಸ್ಸಿದ್ಧವಾದುದು. ಈ ಬಗೆಯ ರಾಜನೀತಿಜ್ಞಾನವಿಲ್ಲದೆ ಇರುವವರು ತಾವು ಮಾಡುತ್ತಿರುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶ್ರೇಯಃ ಕರ್ಮಕ್ಕೆ ಕ್ರಿಮಿ ಕೀಟಾದಿಗಳಿಂದ ಅಡ್ಡಿಯಾಗುವುದೆಂದು ತೋರಿದಾಗ ಶ್ರೇಯಃ ಕರ್ಮವನ್ನೇ ಬಹಿಷ್ಕರಿಸಿ ಬೇರೊಂದು ರೂಪವನ್ನು ಅನುಸರಿಸ ಬಹುದು.[1] ಈ ಬಗೆಯ ನೂತನ ಮಾರ್ಗದಲ್ಲಿಯೂ ಇಂದ್ರಿಯಾತೀತವಾದಂತೆ ಅಸುರ ಗುಣ ಕರ್ಮ ಶಕ್ತಿಗಳು ತಲೆದೋರಿದಾಗ ದಿಗ್ಭ್ರಮೆಯುಂಟಾಗುವುದು. ಆದುದರಿಂದ ಜಾಗರೂಕರಾಗಿದ್ದು ವಿಮರ್ಶಾತ್ಮಕವಾಗಿ ತಿಳಿದ ರಾಜನೀತಿಯು ಸರ್ವಕಾಲದಲ್ಲಿಯೂ ರಕ್ಷಿಸುವಂತೆ ಕಾರ್ಯನಿರ್ವಾಹ ಮಾಡಬೇಕಾಗಿರುತ್ತದೆ.

"ದೇವತೆಗಳು ತೇಜೋರೂಪಿಗಳು; ದೇವತೆಗಳ ವಾಸಸ್ಥಾನವು ಭೂಲೋಕ ದಿಂದ ಬೇರೆಯಾಗಿರುವುದು. ಭೂಲೋಕದಲ್ಲಿ ಅಸುರರೆನಿಸಿದವರು ದೇವತೆಗಳ ನ್ನೆದುರಿಸಿ ಯುದ್ಧ ಮಾಡಿದರು. ಬಲಿಷ್ಠರಾದ ಭೂಲೋಕದ ಅರಸರು ದೇವತೆ ಗಳ ಸಹಾಯಕ್ಕೆ ದೇವಲೋಕಕ್ಕೆ ಹೋಗುತ್ತಿದ್ದರು." ಇವು ಪರಸ್ಪರ ವಿರೋಧಾ ಭಾಸವಾಗಿ ಕಾಣುವುವು. ಕೆಲವು ಶಾಸ್ತ್ರಗಳ ದೃಷ್ಟಿಯಲ್ಲಿ ಈ ಮೇಲ್ಕಂಡ ವಾಕ್ಯಗಳ ಅರ್ಥವು ನಿಜಾಂಶಕ್ಕೆ ದೂರವಾಗಿರುವುದು. ಜನರೆಲ್ಲರೂ ಈ ಬಗೆಯ ಸಂಸೇಹ ಪ್ರವಾಹದಲ್ಲಿ ತೇಲುತ್ತಾ ಮುಳುಗುತ್ತಾ ದಡವನ್ನು ಸೇರದೆ, ಸೇರಲಾ ರದೆ ಇರುವ ಸ್ಥಿತಿ ಬಹುಕಾಲದಿಂದಲೂ ತೋರಿಬರುತ್ತಿರುವುದು ಶೋಚನೀಯ ಭಯದಿಂದ ಮೋಹದಿಂದ ಜನರು ತಮ್ಮೊಳಗಿನ ನಚ್ಚನ್ನು ಅಡಗಿಸಿಕೊಂಡು ಉದಾಸೀನರಾಗಿಯೇ ಇರುತ್ತಾರೆ. ಈ ಮರ್ಮವನ್ನು ರಾಜನೀತಿ ನೇತ್ರದಿಂದ ನೋಡಿ ರಾಜನೀತಿಯ ಅಸ್ತ್ರದಿಂದ ಭೇದಿಸಿದ ಹೊರತು ದೇವತತ್ವ ಮತ್ತು ಅಸುರತತ್ವಗಳು ಗೋಚರವಾಗುವುದಿಲ್ಲ. ಇಂದ್ರಿಯಾತೀತವೂ ಇಂದ್ರಿಯ ವೇದ್ಯವೂ ಆದ ಈ ವಿಷಯವನ್ನು ತಿಳಿದಲ್ಲದೆ ಯಾವ ವ್ಯಕ್ತಿಗೂ ಮಾನವೀಯ ತೆಯು ಸಿದ್ಧಿಸುವುದಿಲ್ಲ. ಅತ್ಯವಶ್ಯಕವಾಗಿ ಭಾರತೇಯನು ಈ ರಹಸ್ಯವನ್ನು ಸಾಕ್ಷಾತ್ಕರಿಸಿಕೊಳ್ಳಬೇಕು. ಈ ಬಗೆಯ ತೊಡಕಿನಿಂದ ಜನರನ್ನು ಪಾರುಮಾಡಿ ಪ್ರಜೆಗಳಾಗಿ ರಾಜ್ಯದ ಪಂಚವಲಯಗಳಲ್ಲಿ ವಿವೇಕದ ಮಟ್ಟದಲ್ಲಿ ಜೀವನವನ್ನು ಮುಂದುವರಿಸುವಂತೆ ಮಾಡುವ ರಾಜನೀತಿ ಜ್ಞಾನವು ಅತ್ಯವಶ್ಯಕ. ಭಾರತ ರಾಷ್ಟ್ರದ ಭಾವನೆಯೂ, ರಾಷ್ಟ್ರೈಕ್ಯವೂ ಡೋಲಾಯಮಾನವಾಗಿರುವ ಸಂದರ್ಭ ದಲ್ಲಿ ಸ್ವರಾಜ್ಯಭಾವನೆ ಸುಗಮವಾಗುವುದಕ್ಕೂ ಹರಕೆಯರಿಂದ ಪುನಃ ಭಾ

1 ಸ್ವಾಮಿ ದಯಾನಂದರ ಚರಿತ್ರೆಯಲ್ಲಿ ಇದನ್ನು ಕಾಣಬಹುದು.

 CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ವಾತಂತ್ರ್ಯಕ್ಕೆ ಧಕ್ಕೆ ಬರದಂತೆ ಎಚ್ಚರವಾಗಿರುವುದಕ್ಕೂ ಪ್ರತಿ ಭಾರತೀಯ ಪ್ರಜೆಯೂ ಸಾಮ್ರಾಜ್ಯ ತತ್ವಗರ್ಭಿತವಾದ ರಾಜನೀತಿಶಾಸ್ತ್ರವನ್ನು ಪ್ರಜಾಸಾಮ್ರಾಜ್ಯಸಂಸ್ಥೆಯು ತೋರಿಸಿರುವ ಮಾರ್ಗದಲ್ಲಿ ರಚಿಸಿ ಪ್ರಚಾರಮಾಡುವುದಕ್ಕೆ ಸಹಕರಿಸಬೇಕಾಗಿರುತ್ತದೆ.

ಕವಿಗಳೂ ಚಿತ್ರ-ಕಲಿಗಾರರೂ ವರ್ಣಿಸಿ ತೋರಿಸಿರುವಂತೆ ರಾಕ್ಷಸ ಜಾತಿಯು ಬೇರೆ ಇಲ್ಲ ಎಂಬುವನ್ನೂ ಈ ಬಗೆಯ ಚಿತ್ರ ಮತ್ತು ವರ್ಣನೆಗಳಂಕ 'ತಯಾ ಗುಣ ಕರ್ಮ ಶಕ್ತಿಗಳು ಭಯಂಕರ'ವೆಂಬುವನ್ನೂ ಭಾವಿಸಬೇಕು ಮತ್ತು ಸರ್ವರೂ ತಮ್ಮಲ್ಲಿರಬಹುದಾದ ಆ ವಿಧವಾದ ಗುಣ ಕರ್ಮಶಕ್ತಿಗಳಿಗೆ ಇಂಬುಗೊಡಬಾರದು. ಸುಂದರವೂ ಸುಸಂಭೋಹಕವೂ ಆದ (ವಸ್ತುಗಳು)-ಪ್ರಾಣಿಗಳು ರಾಕ್ಷಸಗುಣ, ರಾಕ್ಷಸಕರ್ಮ, ರಾಕ್ಷಸಶಕ್ತಿಮಯವಾಗಿರುವುದನ್ನು ಘಟೋತ್ಕಚನ ಮಾಯಾಶಕ್ತಿಕಾರ್ಯಗಳಿಂದ ಉದಾಹರಿಸಿ ತಿಳಿಸುವುದೇ ದಿವ್ಯವಾದ ರಾಜನೀತಿ. ಈ ಬಗೆಯ ಮಾಯಾರೂಪ ಗುಣ ಕರ್ಮ ಶಕ್ತಿಗಳನ್ನು ದೇವತೆಗಳೂ ಹೊಂದಿ ಬಳಕೆಯಲ್ಲಿಟ್ಟುಕೊಂಡಿರುತ್ತಾರೆ.

ಜೀವನದ ತುಲೆಯಲ್ಲಿ ಪಂಚಭಾಜನಗಳಾದ ಕ್ಷೌತ್ರಿಯತ್ವ, ಕ್ಷತ್ರಿಯತ್ವ, ವೈಶ್ಯತ್ವ, ಶೂದ್ರತ್ವ, ನಿಷಾದತ್ವಗಳೆಂಬ ಗುಣ ಕರ್ಮ ಶಕ್ತಿಗಳು ಸಮಾನವಾಗಿಯೇ ತೂಗಬಹುದಾದ ಅಂಶವನ್ನು ಎತ್ತಿ ಹಿಡಿದು, ವಿಷಮಸ್ಥಿತಿಗೆ ಅವಕಾಶವಿಲ್ಲದಂತೆ ಸರ್ವರೂ ರಾಜನೀತಿಯನ್ನು ಅನುಸರಿಸಿ ವ್ಯಕ್ತಿಯ ಸುಖ-ಶಾಂತಿಗೆ ಕಾರಣಾಂತರದಿಂದ ತೊಡಕುಗಳು ಇದ್ದರೂ ದೇಶ (ರಾಷ್ಟ್ರ)ದ ಶಾಂತಿಗೂ ಐಕ್ಯಭಾವನೆಗೂ ಭಂಗ ಬರದಂತೆ ಜಾಗರೂಕರಾಗಿರಬೇಕಾದುದು ಆದ್ಯ ಕರ್ತವ್ಯವಾಗಿರುತ್ತದೆ.[1] ಸ್ವಧರ್ಮ ವಿವೇಕ, ಶೂದ್ರ ಮೀಮಾಂಸಾ ಗ್ರಂಥ

1 ೨೫೦೦ ವರ್ಷಗಳ ಹಿಂದೆಯೇ ಭಾರತ ರಾಷ್ಟ್ರದಲ್ಲಿ ಈ ವಿಷಯದಲ್ಲಿ ಒಡಕು ಉಂಟಾಗಿ, ಮತಾಚಾರಗಳು ಗುಂಪುಗಳು ಅಂಕುರಿಸಿದುವು. ರಾಜಾಸ್ಥಾನದಲ್ಲಿ ಪ್ರದೇಶ ರಾಜ್ಯವಲಯಗಳು ರಾಷ್ಟ್ರೈಕ್ಯಭಾವನೆಯನ್ನು ದೂರೀಕರಿಸಿ ಪರಕೀಯರನ್ನು ಸಹಾಯಕ್ಕೆ ಸ್ವಾಗತಿಸಿದವು. ಪರಕೀಯರ ಕೈವಾಡವೇ ಹೆಚ್ಚುತ್ತಾ ಬಂದು ಭಾರತರಾಷ್ಟ್ರವು ಪೂರ್ಣವಾಗಿ ಪರಕೀಯರ ಆಡಳಿತಕ್ಕೆ ಸಿಕ್ಕಿತು. ರಾಜನೀತಿ ಶಾಸ್ತ್ರದ ಪಾಠಗಳಲ್ಲಿ ದಿವಾಳಿತನವನ್ನು ಹೊಂದಿರುವ ಪರಕೀಯ ಆಡಳಿತಗಾರರು ಪರಕೀಯರಾಗಿಯೇ ವರ್ತಿಸಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳಲ್ಲಿ ಈ ವಿಷಯಗಳು ಶಾಸ್ತ್ರೀಯವಾಗಿ ರಾಜನೀತಿ ಛತ್ರದ ನೆರಳಿನಲ್ಲಿ ವಿಶದವಾಗಿ ಪ್ರಪಂಚಿತವಾಗಿವೆ.

ದ್ವೈತ, ವಿಶಿಷ್ಟಾದ್ವೈತ, ಅದ್ವೈತ ವೇದಾಂತ ವಿಚಾರಗಳಿಗೆ ರಾಜನೀತಿಯು ಉತ್ತಮವಾದ ಸಾಮಾನ್ಯ ಅಪವರ್ತನವಾಗಿರುವುದರಿಂದ ಭೇದಭಾವನೆಗಳನ್ನು ಬಿಟ್ಟು ರಾಷ್ಟ್ರದ–ವಿಶ್ವದ – ಪ್ರಜೆಗಳನ್ನು ಭಗವತ್ಸ್ವರೂಪರೆಂಬ ಮಿತಿಯಲ್ಲಿ ತಿಳಿದು ಸರ್ವರೂ ಮನೋಜ್ಞಾನವನ್ನು ಸಮಷ್ಠಿಯಲ್ಲಿ ರೂಪಿಸಿಕೊಳ್ಳಲು ಉತ್ತಮ ಸಾಧನವಾದ ರಾಜನೀತಿಯ ನೆರಳಿನಲ್ಲಿ ಆಶ್ರಯವನ್ನು ಹೊಂದಬೇಕು.

ಮೂಲ ಗ್ರಂಥಗಳು ದ್ವೈತಾದ್ವೈತ ವಿಶಿಷ್ಟಾದ್ವೈತಗಳ ದೃಷ್ಟಿಕೋಣಗಳನ್ನು ತಿಳಿದು ಹೊಂದಿಲ್ಲವೆಂದು ಮಾನವೀಯತೆಯ ಮಾನವನು ಸ್ವಕಪೋಲ ಕಲ್ಪನೆಯನ್ನು ಬಿಟ್ಟು ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದಕ್ಕಾಗಿ ಸರ್ವಸಮವಾಗಿರುವಂತೆ ರಾಜನೀತಿಯನ್ನು ಆದರಿಸಬೇಕು. ದ್ವೈತಾದ್ವೈತವಿಶಿಷ್ಟಾದ್ವೈತ ಸಮನ್ವಯವನ್ನು ಆಂಜನೇಯನ ದಿವ್ಯೋಕ್ತಿಗಳು ಸ್ಪಷ್ಟಪಡಿಸುವವು. ಶಿವ ವಿಷ್ಣುಗಳೆಂಬ ಭೇದವನ್ನೆಣಿಸದೆ ಆತ್ಮತತ್ವವನ್ನೂ ಉಪಾಸನಾ ರಹಸ್ಯವನ್ನೂ ಸಾಕ್ಷಾತ್ಕರಿಸಿ ವರ್ತನೆಯು ವೈಷಮ್ಯಕ್ಕೆ ಈಡಾಗದಂತೆ ರಾಷ್ಟ್ರನೀತಿಯ ಆದರ್ಶವನ್ನು ಸ್ಥಾಪಿಸಿ ಯೋಗೀಶ್ವರ–ಆಂಜನೇಯನು ಅನುಗ್ರಹಿಸಿರುವುದು ಸರ್ವಾದರಣೀಯವಾಗಿರುತ್ತದೆ.[1] ಒಬ್ಬಿಶಕ್ತಿಯು ಅತ್ಯುತ್ಕಟತೆಯ ವೈವಿಧ್ಯ

ದುರ್ನೀತಿಯು ಮತ್ತು ಅನೀತಿಯು ಬಹಿಃ ಮನೋಹರವಾಗಿ ಕಾಣಿಸಿಕೊಳ್ಳುವಂತೆ ಮಾಡುತ್ತಿದ್ದುದೂ, ಈ ಪ್ರಕರಣಗಳಲ್ಲಿ ರಾಜನೀತಿಜ್ಞಾನಶೂನ್ಯರಾದ ದೇಶೀಯರನೇಕರು ಅವರನ್ನು ಹಿಂಬಾಲಿಸುವ ಸಂದರ್ಭ ಒದಗಿದ್ದುದೂ, ಕೊನೆಗೆ ಅವರವರ ದುರ್ವರ್ತನೆಗಳು ಅವರನ್ನೇ ಕಬಳಿಸಿದ ವಿಚಾರವೂ ರಾಜನೀತಿ ಶಾಸ್ತ್ರ ತತ್ವವಿಮರ್ಶೆಗೆ ಉದಾಹರಣೆಯಾಗಿರುತ್ತವೆ. ಸ್ವರಾಜ್ಯ ಸ್ವಭಾಷೆಯ ತಿರಸ್ಕಾರವೂ, ಹೀಗೆಯೇ ಭಾರತಪುತ್ರರಲ್ಲಿ ದಾಯಾದ ವರ್ತನೆಯು ತಲೆದೋರಿದ್ದೂ ಪರಕೀಯರ ಕುಪಕ, ಲೋಭ, ಮತ್ತು ದಾಸ್ಯಕ್ಕೆ ಬಳಗಾದುದೂ ಸ್ವರಾಜ್ಯ ನಾಶಕ್ಕೆ ಕಾರಣ.

1 ಇದಕ್ಕನುಗುಣವಾಗಿ ರಾಜನೀತಿ ಶಾಸ್ತ್ರಜ್ಞನಾ-ಅಧ್ಯಯನ ಕಾರ್ಯಾರಂಭಕ್ಕಾಗಿ ಪ್ರಜಾಸಾಮ್ರಾಜ್ಯಂ ಆಶ್ರಯದಲ್ಲಿ ಸುಂದರಕಾಂಡವನ್ನು ಮುದ್ರಿಸಿ ಪ್ರಕಟಿಸಿದೆ. ಸುಂದರಕಾಂಡದ ರಾಜನೀತಿ ವಚನಗಳು ವಕ್ತೃವಿನ ಸ್ವಂತ ಅನುಷ್ಠಾನದಿಂದ ಹೃದಯಂಗಮವಾಗಿ ಪ್ರವೃತ್ತಿ ಪರವಾಗಿರುವುವು.

CC-0. In Public Domain. Gurukul Kangri Collection, Haridwar

*

Digitized by Arya Samaj Foundation Chennai and eGangotri

ವನ್ನು ತೋರಿಸಿ ಕೇವಲ ಗೌರವಕ್ಕೆ ಪಾತ್ರವಾಗಿರುವುದು. ಬುದ್ಧಿಶಕ್ತಿಯು ಅಥವಾ ಪಾಂಡಿತ್ಯದ ಈ ವ್ಯಾಪಾರವು ನ್ಯಾಯಾಲಯಗಳಲ್ಲಿಯೂ ಸಹ ನ್ಯಾಯವು ಅನ್ಯಾಯವಾಗಿಯೂ, ಅನ್ಯಾಯವು ನ್ಯಾಯವಾಗಿಯೂ ಪರಸ್ಪರ ಸ್ಥಿತಿಗೆ ವಿರುದ್ಧವಾಗಿರುವಂತೆ ಮಾಡಬಹುದು.

ಸಾರ್ವಜನಿಕವಾಗಿ ಸಾರ್ವತ್ರಿಕವಾಗಿ ಸದಾ ಪ್ರಜಾಸೇನೆ ಮಾಡಬೇಕಾಗಿರುವ ಮತ್ತು ಪ್ರಜಾಸೇವೆಯನ್ನು ಪ್ರಜೆಗಳ ವಸತಿಯಲ್ಲೇ ನಡೆಸಬೇಕಾಗುವ ರಾಜ್ಯದ ಅಂಚೆ ವಿಭಾಗದಲ್ಲಿ ರಾಜನೀತಿಯ ಶಾಸನದ ಪ್ರಕಾರ ಪ್ರಾಮಾಣಿಕವೆಂದು ಕಂಡುಬಂದರೂ ಅಂಚೆ ಕಾಗದಗಳ ಅಥವಾ ಋಣಕಾಸುಗಳ ವಿನಿಯೋಗದಲ್ಲಿ ಅಂಚೆ ಅಧಿಕಾರಿಗಳು ತೋರಿಸುವ ಅಧಿಕಾರಿಕ ದರ್ಪವು ರಾಜನೀತಿಜ್ಞಾನದಿಂದ ದೂರವಾಗಿದ್ದರೆ ರಾಜ್ಯದ ಮತ್ತು ಪ್ರಜೆಗಳ ಆರ್ಥಿಕ, ಮಾನಸಿಕ ಕ್ಲೇಶಗಳಿಗೆ ಅವಕಾಶವಾಗಬಹುದು.[1]

ನಿಯಮಗಳನ್ನು ದೂರೀಕರಿಸುವುದರಿಂದಲೂ ಹೆಮ್ಮೆಯಿಂದ ಜವುಗಳನ್ನು ಅನುಸರಿಸಿ ಗಣಿತಶಾಸ್ತ್ರದಂತೆ ನಡೆಯುವುದರಿಂದಲೂ ವ್ಯವಹಾರವು ಬಿಕ್ಕಟ್ಟಾಗಿ ಜನತೆಯ ನೆಮ್ಮದಿಯು ಕೆಡುವುದರಿಂದ ರಾಜನೀತಿಯ ಮಿತಿಯಲ್ಲಿರುವುದೇ ಕ್ಷೇಮಕರವು. ಪ್ರಾಣಿಗಳ ಮತ್ತು ಬಹಿಶ್ಚರ ಪ್ರಾಣಗಳ ರಕ್ಷಣೆಯ ಹೊಣೆಗಾರಿಕೆಯುಳ್ಳ ನಗರ ರಕ್ಷಣಾಧಿಕಾರಿಗಳೂ ಲೋಹಮಾರ್ಗದ ಕಾರ್ಯಾಲಯಗಳ ಅಧಿಕಾರಿಗಳೂ ಹೆಚ್ಚು ಗಮನಕೊಡಬೇಕಾದ ಆವಶ್ಯಕತೆಯನ್ನು ತಿಳಿದು ಅನೇಕರು ಕರ್ತವ್ಯನಿಷ್ಠರಾಗಿ ರಾಜನೀತಿಯನ್ನು ವ್ಯಾಸಂಗ ಮಾಡದಿದ್ದರೂ ವರ್ತನೆಯಲ್ಲಿ ಬೆಳಗುತ್ತಿರುವುದು ಶ್ಲಾಘನೀಯವಾದುದು.

ವರ್ಣಾಶ್ರಮಗಳ ಸ್ವರೂಪ–ಇತಿ ಮಿತಿ ಜ್ಞಾನ ಮತ್ತು ಅನುಭವಗಳನ್ನು ರಾಜನೀತಿ ಎಂಬ ಅಪವರ್ತನ ಸಾಧನವಿಲ್ಲದೆ ಪಡೆಯುವುದರಿಂದ ನ್ಯೂನಾತಿರಿಕ್ತ (ಉಚ್ಚನೀಚ) ಭಾವನೆಗಳು ತಲೆ ದೋರಿ ಪುನರ್ಜಾಂತಿಗೆ ಭಗವನ್ನುಂಟುಮಾಡುವುವು. ದೇಶೀಯರಿಗೇನೆ ಇವುಗಳ ಮರ್ಮವು ತಿಳಿಯದಿರುವ ಸಂದರ್ಭದಲ್ಲಿ

1 ಪ್ರ. ಸಾ. ಪತ್ರ 1084/29–10–66 ಮತ್ತು P.M.G. ಪತ್ರ C.P.T. 4–144/15–12–66

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರಕೀಯ ಆಡಳಿತಗಾರರು ಇವುಗಳನ್ನು ಜ್ಞಾನಲವದುರ್ವಿದಗ್ಧರಂತೆ ಪ್ರಧಾನವಾಗಿ ಭಾವಿಸಿ ವರ್ಣತತ್ವಗಳ ನಿಜಸ್ಥಿತಿಯನ್ನು ತಿಳಿಯದೆ ಚಿತಾವಣೆ ನಡೆಸಿದ ಪರಿಣಾಮವಾಗಿ ವರ್ಣದ್ವೇಷವು ಹರಡಿರುತ್ತದೆ. ಈ ಕಾರಣದಿಂದ ದುರಂತಕ್ಕೆ ಈಡಾಗಿರುವ ಪುನೋಧರ್ಮವನ್ನು ರಾಜನೀತಿಯ ಶಿಕ್ಷಣ, ಅಭ್ಯಾಸ, ಅನುಷ್ಠಾನಮಾರ್ಗಗಳಿಂದ ಎದುರಿಸಿ ದಮನ ಮಾಡಿ ಸಮಸ್ಥಿತಿಯಲ್ಲಿರುವಂತೆ ಸ್ಥಾಪನೆ ಮಾಡಿ ಕೃತಕೃತ್ಯರಾಗಬೇಕಾದ ಗುರುತರ ಕರ್ತವ್ಯವು ತತ್ಪಶಾಸ್ತ್ರ ನಿಧಿಯಾವ ಭಾರತ ರಾಷ್ಟ್ರದ ಪ್ರಜೆಗಳ ಕರ್ತವ್ಯವಾಗಿದೆ.[1]

೪

ರಾಜನೀತಿಶಾಸ್ತ್ರ ಸುಧಾರಣೆಗೆ ದಾಂಪತ್ಯವು ಪ್ರಶಸ್ತವಾದುದು. ವಿವಾಹ ಸಂಸ್ಕೃತಿಯಿಂದ ಪೂತರಾದ ದಂಪತಿಗಳು 'ಆಚಾರ್ಯ' ಪೀಠಕ್ಕೂ ಕಂಕಣಬದ್ಧರಾಗಿ ಕಾರ್ಯನಿರ್ವಾಹಕರ್ಕೂ ಅರ್ಹರಾಗಿರುತ್ತಾರೆ ಮಾನವೋನ್ನತಿಗಾಗಿಯೂ ಮಾನವೇತರ ಜಂತುಗಳಿಗಿಂತ ಮಾನವರು ಶ್ರೇಷ್ಠರೆಂಬುದು ಸ್ವತಸ್ಸಿದ್ಧವಾಗುವಂತೆ ಮಾಡುವುದಕ್ಕೂ ಘನತರವಾದ ವಿವಾಹಾದಿ ಸಂಸ್ಕೃತಿಗಳು ಆತ್ಮನಿಷ್ಠರಾದ ಜ್ಞಾನಿಗಳಿಂದ ರೂಪಿಸಲ್ಪಟ್ಟವೆ. ರಾಜನೀತಿಯ ವಿಶಾಲದೃಷ್ಟಿಯಿಂದ ಇವುಗಳನ್ನು ಕಾರ್ಯ ರೂಪಕ್ಕೆ ತರಬೇಕಾಗಿದೆ. ರಾಜನೀತಿಯನ್ನು ಬಡಿಗೊತ್ತಿ ನಡೆದ, ನಡೆಯುವ, ನಡೆಸುವ ವಿವಾಹಾದಿ ಉತ್ತಮ ಸಂಸ್ಕಾರಕಾರ್ಯಗಳು ಕಲುಷಿತವಾಗುವುದರಿಂದ ಮಾನವೀಯತೆಗೆ ಗ್ಲಾನಿಯುಂಟಾಗಿ ಮಾನವಜನ್ಮವೇ ನಿರರ್ಥಕವಾಗುವುದು. ಸಂತಾನ-ಸೃಷ್ಟಿಗೆ ಸಂಬಂಧಪಟ್ಟ ಸಂಸ್ಕೃತಿಗಳು ಸ್ವಭಾವವಾಗಿಯೇ ವಿರಾಟ್‌ರೂಪನ ಋತ-ಕ್ಷತ್ರಗಳ ಮಿತಿಯಲ್ಲಿ ಮಾನವೇತರ ಪ್ರಾಣಿವರ್ಗದಲ್ಲಿ ಅತ್ಯುತ್ತಮ ರೀತಿಯಲ್ಲಿ ನಡೆಯುವುವು. ಮಾನವಜನ್ಮದ ಇತಿ ಮಿತಿಗಳು, ಜೀವನದ ಅಗು ಹೋಗುಗಳು, ಅಭ್ಯುದಯ ಶ್ರೇಯಸ್ಸು ಮೊದಲಾದುವುಗಳಿಗೆ ಸುಸಂಸ್ಕೃತವೂ ಪರಿಷ್ಕೃತವೂ ಆದ ಯುವತೀ ಯುವಕರ

1 ಪ್ರಜಾಸಾಮ್ರಾಜ್ಯಂ ಸಂಸ್ಥೆಯು ಇದಕ್ಕಾಗಿಯೇ ಸರ್ವ ಪ್ರಯತ್ನವನ್ನೂ ಮಾಡುವುದಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿವಾಹವೇ ಸತ್ಪ್ರಜಾಭಿವೃದ್ಧಿಗೂ ರಾಷ್ಟ್ರದ ಏಳಿಗೆಗೂ ತಳಹದಿಯಾಗಿರುವ ವಿಚಾರವು ಕ್ಷೇತ್ರಜ್ಞ ರಾಜನ ರಾಜನೀತಿಯಿಂದ ಕರತಲಾಮಲಕದಂತೆ ಸ್ಪಷ್ಟವಾಗುವುದು. ವಿವಾಹಿತ ಸ್ತ್ರೀ, ಕುಟುಂಬ ರಾಜ್ಯವಲಯದಲ್ಲಿ 'ಸಮ್ರಾಜ್ಞೀ' ಆಗಿರಬೇಕೆಂಬುದೇ ವೇದಮಂತ್ರಗಳ ಆಶೀರ್ವಚನ.

ಇತರ ದೇಶಗಳಲ್ಲಿರುವ ಪದ್ಧತಿಗಳಿಗಿಂತ ಅತ್ಯುತ್ತಮವೆನಿಸಿದ ಭಾರತದ ಶಾಸ್ತ್ರೋಕ್ತ ವಿವಾಹ ಪದ್ಧತಿ ಸಂಸ್ಕೃತಿಯು ಅನ್ಯರ ಪದ್ಧತಿಗಳ ಅನುಕರಣದಿಂದಲೂ, ಆಡಂಬರದಿಂದಲೂ ದುಷ್ಪರಿಣಾಮಗಳಿಗೆ ಗುರಿಯಾಗಿ ರಾಷ್ಟ್ರದ ಅವನತಿಗೆ ಕಾರಣವಾಗುತ್ತಿದೆ. ಮನೆ ಮಠ ಆಸ್ತಿಗಳನ್ನು ಮಾರಿ ನಡೆಸಿದ ಕನ್ಯಾದಾನವನ್ನು ಪರಿಗ್ರಹಮಾಡಿದವರು ಒಂದು ಕುಟುಂಬವನ್ನೇ ಹಾಳು ಮಾಡಿದ ಅಪರಾಧಕ್ಕೆ ಗುರಿಯಾಗುತ್ತಾರೆ. ರಾಷ್ಟ್ರ ಕಲ್ಯಾಣಕ್ಕೆ ಧಕ್ಕೆ ತಗಲುವುದು. ದುರ್ದಾನಗಳನ್ನೂ ಮತ್ತು ಅವುಗಳಿಗಾಗಿ ಕೂಡುವ ಹೆಚ್ಚು ಧನವನ್ನೂ ಸ್ವೀಕರಿಸಿದಂತಾಗುತ್ತದೆ. ವಿಶ್ವದಲ್ಲಿ ವ್ಯಕ್ತ್ಯಾದಿ ರಾಜ್ಯವಲಯಗಳ ರಹಸ್ಯವನ್ನು ತಿಳಿದು ವಿಶ್ವಕುಟುಂಬದ ಕಾರ್ಯವನ್ನು ನಿರಾತಂಕವಾಗಿ ನಡೆಸಲು ಸದ್ಗೃಹಸ್ಥಾಶ್ರಮವನ್ನು ರಾಜನೀತಿಗನುಸಾರವಾಗಿ ಅವಲಂಬಿಸದೇ ಇರುವ ಮಾನವ ಜೀವನವು ಸ್ವಪರಹಿತಕ್ಕೆ ದುರಂತಪ್ರಾಯವಾಗುವುದು. ಜನನೀ ಜನಕರಾದ ದಂಪತಿಗಳೂ, ವಿವಾಹವಾಗುವ ಯುವಕ ಯುವತಿಯರೂ ಪಂಚ ರಾಜ್ಯವಲಯಗಳಲ್ಲಿನ ಆಯಾ ನಾಯಕರೂ ವಿವಾಹ ಸಂಸ್ಕೃತಿಯ ಪೂರ್ಣ ಫಲಪ್ರಾಪ್ತಿಗಾಗಿ ರಾಜನೀತಿಯಲ್ಲಿ ಶಿಕ್ಷಣಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು.

ನ್ಯಾಯವಾರಿದ ಧನವನ್ನು ಕೂಡಿಹಾಕಿಕೊಂಡಿರುವವರಿಗೂ, ಧನವನ್ನು ಕೂಡಿಹಾಕಿಕೊಳ್ಳದವರಿಗೂ, ಗ್ರಂಥಜ್ಞಾನವುಳ್ಳವರಿಗೂ, ಗ್ರಂಥ ಪರಿಚಯವಿಲ್ಲದವರಿಗೂ ವಿವಾಹ ಸಂಸ್ಕೃತಿಯು ಏಕ ಪ್ರಕಾರವಾಗಿರುವುದು. ಆದುದರಿಂದ ವಿಶ್ವಸಾಮಾನ್ಯವಾಗಿ ಅನುಷ್ಠಾನಕ್ಕೆ ಒರುವಂತೆ ಸರ್ವರೂ ಆದರ್ಶವಾಗಿ ಮಿತಿಯಲ್ಲಿ ಆಚರಿಸಬೇಕು. ಧನ ಪ್ರಧಾನವಾದ ಆಡಂಬರಾದಿಗಳು ವಿವಾಹ ಸಂಸ್ಕೃತಿಯನ್ನು [1] ಕೆಡಿಸುವುವು; ಕೆಟ್ಟುಹೋದ ಸಂಸ್ಕೃತಿಯು ದುರಂತದಲ್ಲಿ ಕಾರಣವು

1 ಮಂಗಳ ವಿವಾಹ ಸಂಸ್ಕೃತಿ (ಹಿ. ಕಾ. ಸುಬ್ರಾಯ, ಶಕ ೧೮೮೬) ಗ್ರಂಥದಲ್ಲಿ ವಿಸ್ತಾರವಾಗಿ ಹೇಳಲ್ಪಟ್ಟಿದೆ. — ಬೆಲೆ 30 ಪೈಸೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸುವುದು ಧರ್ಮಗ್ಲಾನಿ. ಸಂಸ್ಕೃತಿಗ್ಲಾನಿಗಳಿಂದ ವ್ಯಕ್ತಿಕುಟುಂಬಾದಿಗಳು ಕುಸಿದುಬೀಳುವುವು; ಪ್ರಜಾಹಾನಿ. ದಾರುಣವಾದ ದಾರಿದ್ರ್ಯ, ಆಹಾರಾಭಾವ ರೋಗ ಮತ್ತು ಪ್ರಕೃತಿಯ ಸಂಚಿಭೂತ ವ್ಯಾಪಾರಗಳ ನ್ಯೂನಾತಿರೇಕಗಳು ಪರಂಪರೆಯಾಗಿ ತಲೆದೋರುವುವು. ಈ ಬಗೆಯ ಈ ಬಾಧೆಗಳನ್ನು ಕೋಗ ಲಾಡಿಸುವುದಕ್ಕೂ ರಾಜನೀತಿಯ ಪರಿಚಯವು ಆವಶ್ಯಕವೆಂಬುದು ಸ್ವತಸ್ಸಿದ್ಧ ವಾಗಿದೆ. ಸ್ವಕರ್ತವ್ಯವನ್ನು ನೆರವೇರಿಸಲು ಯತ್ನಿಸದೆ ಕೆಲವರು ತಮ್ಮಲ್ಲಿರುವ ಅಶಕ್ತತೆಯನ್ನು ಎಮ್ಮಚ್ಚಿಕೊಳ್ಳುವುದಕ್ಕಾಗಿಯೇ ಎಂಬಂತೆ 'ರಾಜಾ ಕಾಲಸ್ಯ ಕಾರಣಂ' ಎಂದು ಉದಾಹರಿಸುವುದು ಪಾಡಿಲ್ಲ. ಈ ಮೂಲತತ್ವವು ಗಹನವೂ ಸಾರ್ವರಸ್ಯವುಳ್ಳದ್ದೂ ಆಗಿ ಪ್ರಪಂಚಕ್ಕೆ ಅಸ್ತಿತ್ವವನ್ನು ಕೊಡುವ ರಾಜನೀತಿಯ ತತ್ವವಾಗಿದೆ. ಪ್ರಭುತ್ವ, ಉತ್ಸಾಹ, ವಿವೇಚನ ಶಕ್ತಿಗಳಿಂದ ಕೂಡಿದ ರಾಜತ್ವವು 'ಕಾಲ' ಎಂಬಲ್ಲಿ 'ಕರ್ಮ'ಕ್ಕೆ[1] ಮೂಲವಾಗಿರುತ್ತದೆ. ಪ್ರಜೆಗಳಲ್ಲಿ ಈ ಲಕ್ಷಣದ ರಾಜತ್ವವು ತುಂಬಿರುವುದರಿಂದಲೇ ಕರ್ಮವು ನೆರವೇರುವುದು. ಕರ್ಮ ದಿಂದ ರಾಜನೀತಿಯ ಪಂಚನಲಯದಲ್ಲಿಯ ರಾಜ್ಯಗಳು ಸಾಗುತ್ತಿರುವವು. ಕರ್ಮ ಮೂಲವಾದ ರಾಜತ್ವವು ರಾಜನೀತಿಜ್ಞಾನದಿಂದ ವ್ಯವಸ್ಥಿತವಾಗಬೇಕು. 'ರಾಜಾ ಕಾಲಸ್ಯ ಕಾರಣಂ' ಎಂಬುದು ಅಕ್ಷರಶಃ ಸತ್ಯವಾಗಿ ಪ್ರತಿವ್ಯಕ್ತಿಯ ಹೊಣೆಗಾರಿಕೆಯನ್ನು ಸೂಚಿಸುವುದು.

ಸಭೆ ವಿವಾಹಾದಿ ಉತ್ಸವ ಕಾಲಗಳಲ್ಲಿ ಜನಸಂಮರ್ದದಿಂದ ಉಂಟಾಗುವ ಮಾನಾಪಮಾನಾದಿ ದುರ್ಘಟನೆಗಳ ಸಮಯ ಸಂದರ್ಭಗಳನ್ನು ಮನಗಂಡು ಮೋಹದಿಂದ ಜನರನ್ನು ಸೇರಿಸುವ ದೋಷಕ್ಕೆ ಅವಕಾಶಕೊಡಬಾರದು; ಅಂತಹ ಲೋಪದೋಷಗಳು ಕಂಡುಬಂದಾಗ ಅನಿವಾರ್ಯವೆಂದು ಭಾವಿಸಿ, ಮನೋವಿಕಾರಕ್ಕೆ ಅವಕಾಶ ಕೊಡದೆ ಶುಭ ಕರ್ಮಗಳಿಂದ ಶುಭಫಲವು

1 ಪ್ರಜಾಸಾಮ್ರಾಜ್ಯಂ ಆಶ್ರಯದಲ್ಲಿ ಕಾಲ, ಕರ್ಮ, ಯಜ್ಞ, ಅಮೃತಮಂಥನ, ಜ್ಯೋತಿಷಗಳ ಮೇಲೆ ಸಂಶೋಧನೆ ನಡೆದು ಶ್ರೀ ಬಿ. ವಿ. ರಾಮ ರವರ ಕೃಪೆಯಿಂದ ಆಸ್ಟ್ರಲಾಜಿಕಲ್ ಮ್ಯಾಗ್ಜೈನ್(1961)ನಲ್ಲಿ ಪ್ರಕಟಿತವಾಗಿರುವುದು. ಪುಟ 779; 886

ಈ ವಿಷಯಗಳನ್ನೊಳಗೊಂಡ ಜ್ಯೋತಿಶ್ಶಾಸ್ತ್ರ ಮಹಿಮೆ ಎಂಬ ಗ್ರಂಥವು ಮುದ್ರಣಕ್ಕೆ ಸಿದ್ಧವಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಾಪ್ತಿಯಾಗುವಂತೆ ಸಹಕಾರವನ್ನು ನೀಡುವವರೂ ಅಹಂಕಾರ ವರ್ಜಿತರಾದ ಕರ್ತೃಗಳೂ ರಾಜನೀತಿ ಪರರಾದ ಮೇಧಾವಿಗಳೂ ಮಹಾತ್ಮರೂ ಆಗಿರುತ್ತಾರೆ.

ಮೇಲ್ಕಂಡ ವೇದೋಕ್ತ ಸಂಸ್ಕೃತಿಗಳ ದೃಷ್ಟ– ಅದೃಷ್ಟ–ಅಪೂರ್ವ ಫಲ ಪ್ರಾಪ್ತಿಯ ವ್ಯಾಪಾರಗಳ ರಹಸ್ಯವನ್ನು ತಿಳಿಯುವುದಕ್ಕಾಗಿ. ಅವುಗಳಲ್ಲಿ ಪೂರ್ಣಾನುಭವವುಳ್ಳ ಸುಸಂಸ್ಕೃತರಿಗೆ ಪುರೋಹಿತ ಪದವಿಯನ್ನು ಅರ್ಪಿಸಿ ಅವರ ಸೂಕ್ತಿಯನ್ನು ಪಡೆಯುವುದೂ ಅದರಂತೆ ಕಾರ್ಯ ನಿರ್ವಾಹ ಮಾಡುವುದೂ ವಾಡಿಕೆಯಾಗಿರುತ್ತದೆ.

ಪುರೋಹಿತರ ನೆರವು ಜೀವನದ ಪ್ರತಿ ಘಟ್ಟದಲ್ಲಿಯೂ ಆವಶ್ಯಕವಾಗಿರುತ್ತದೆ; ಆದುದರಿಂದ ಪುರೋಹಿತರು ಆಚಾರ್ಯ ಕರ್ತವ್ಯಗಳಲ್ಲಿ ಸರ್ವದಾ ನಿಷ್ಠರಾಗುವಂತೆ ಮಾಡುವ ಭಾರವು ಪ್ರಜೆಗಳಿಗೆ ಸೇರಿದೆ. ದೇವಕಾರ್ಯಕ್ಕೂ ಅಸುರಕಾರ್ಯಕ್ಕೂ ಪುರೋಹಿತರ (ಬೃಹಸ್ಪತಿ ಮತ್ತು ಶುಕ್ರ) ಸಹಾಯವು ಅನಿವಾರ್ಯವಾಗಿರುತ್ತದೆ. ಪ್ರಜೆಗಳನ್ನು ಪಾಪ ಕರ್ಮಗಳಿಂದ ಹಿಂತಿರುಗಿಸದೇ ಇರುವ ರಾಜತ್ವವು ಪ್ರಜೆಗಳ ಕ್ಲೇಶಕ್ಕೆ ಹೊಣೆಯಾಗುವುದು; ರಾಜತ್ವವನ್ನು ನಿರ್ದೇಶಿಸಿ, ನಿಯಂತ್ರಿಸದೇ ಇರುವ ಪುರೋಹಿತರು ರಾಜದೋಷಕ್ಕೆ ಹೊಣೆಯಾಗುವರು– ಎಂದು ಹೇಳಿದೆ. ಎಲ್ಲದಕ್ಕಿಂತಲೂ ಅತಿಶಯವಾದ ಹೊಣೆಗಾರಿಕೆಯು 'ಆತ್ಮಾನಂ ಆತ್ಮನಾ ಉದ್ಧರೇತ್' ಎಂಬಂತೆ ಪ್ರಜೆಗಳಿಗೆ ಸಲ್ಲುವುದೆಂದು ರಾಜನೀತಿಯು ವಿಧಿಸುತ್ತದೆ.

ದೇವತಾ ಸಂಬಂಧದ ಮತ್ತು ವ್ಯಾವಹಾರಿಕವಾದ ವಿಷಯಗಳಿಗೆ ಸಹಾಯಕರಾದ ಪುರೋಹಿತರನ್ನು ಪೋಷಿಸುವ, ಪ್ರೋತ್ಸಾಹಿಸುವ ಮತ್ತು ಉತ್ತೇಜನ ಗೊಳಿಸುವ ಕರ್ತವ್ಯವು ಪ್ರಜೆಗಳಿಗೆ ಸೇರಿದ್ದು. ಪುರೋಹಿತರು ತಗ್ಗದೆ, ಹಿಗ್ಗದೆ ಅಧೀನರಾಗಿ ತಪಸ್ಸನ್ನೂ ತಪೋಬಲವನ್ನೂ ದಿನೇ ದಿನೇ ಹೆಚ್ಚಿಸಿಕೊಳ್ಳುವಂತೆಯೂ, ಅವರ ಆಶೀರ್ವಚನಗಳು 'ವಾಚಂ ಅರ್ಥಃ ಅನುಧಾವತಿ' ಎಂಬಂತೆ ಕ್ಷಿಪ್ರವಾಗಿ ಫಲಪ್ರದವಾಗುವ ಸಾಮರ್ಥ್ಯವುಳ್ಳವರಂತೆಯೂ ಪ್ರಜೆಗಳು ಪುರೋಹಿತರನ್ನು ರಾಜನೀತಿಯ ಮಿತಿಯುಲ್ಲಿ ಸಂರಕ್ಷಿಸಬೇಕು. ಈ ಕರ್ತವ್ಯವನ್ನು ತಿಳಿದೂ ಸಹ ತಿಳಿಯದಂತೆ ಉದಾಸೀನರಾಗಬಹುದಾದ ಪ್ರಜೆಗಳು ಕರ್ತವ್ಯ ಭ್ರಷ್ಟರಾಗುವರು. ಕರ್ತವ್ಯ ಭ್ರಷ್ಟತೆಯು ಆತ್ಮದ್ರೋಹ–ಆತ್ಮವಂಚನೆಯನ್ನು ಸೂಚಿಸುವುದು. ಇದರಿಂದುಂಟಾಗುವ ದುಷ್ಟ ಫಲವನ್ನು ಆಯಾ ಕುಟುಂಬ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮತ್ತು ವ್ಯಕ್ತಿಗಳು ಮಾತ್ರವಲ್ಲದೆ ಸಮಾಜ, ಪ್ರದೇಶ, ರಾಜ್ಯವಲಯಗಳಿಗೆ ಸೇರಿದವರೆಲ್ಲರೂ ಅನುಭವಿಸಬೇಕಾಗುತ್ತದೆ. ಈ ರಾಜನೀತಿಯು ಸದಾ ಬುದ್ಧಿಸ್ಥವಾಗಿದ್ದರೆ ರಾಷ್ಟ್ರವು ಈಷದಪಿ ದುಃಖಕ್ಕೆ ಈಡಾಗುವುದಿಲ್ಲವೆಂಬುದು ತರ್ಕಬದ್ಧವೂ ನಿಶ್ಚಿತವೂ ಆದ ವಿಷಯ.

೬

ರಾಜನೀತಿಯು ವ್ಯಾವಹಾರಿಕ ಯೋಗವೆನಿಸುವುದು. ವ್ಯವಹಾರದಲ್ಲಿ ಸರ್ವ ಪ್ರಕಾರದಲ್ಲಿಯೂ ಸಂತೋಷ ಸಮಾಧಾನಗಳನ್ನು ಅಂತಃ ಹೊಂದುವುದೂ ಬಹಿಃ ಪ್ರಕಾಶಪಡಿಸುವುದೂ ಆದರ ಮುಖ್ಯ ತತ್ವ. "ಸಂತೋಷಂ ಜನಯೇತ್ ಪ್ರಾಜ್ಞಃ, ತದೇವೇಶ್ವರಪೂಜನಂ" "ಜೀರ್ಣ ಭದ್ರಾಣಿ ಪಶ್ಯತಿ" "ಅನಿರ್ವೇದಃ ಶ್ರಿಯೋ ಮೂಲಂ, ಅನಿರ್ವೇದಃ ಪರಂ ಸುಖಂ, ಅನಿರ್ವೇದೋ ಹಿ ಸತತಂ ಸರ್ವಾರ್ಥೇಷು ಪ್ರವರ್ತಕಃ, ಕರೋತಿ ಸಫಲಂ ಜಂತೋಃ ಕರ್ಮ-ಯತ್ಕಿಂ ಕರೋತಿ ಸಃ"[1] ಎಂಬ ಆಂಜನೇಯನ ವಾಕ್ಯಗಳು ಪ್ರಚೋದಕಗಳಾಗಿವೆ. ತಾತ್ಕಾಲಿಕವಾದ ಪ್ರಸಂಗಗಳು ಅಹಿತವಾಗಿದ್ದರೂ ಅಹಿತವಾಗಿರುವಂತೆ ಕಂಡುಬಂದರೂ 'ದುಃಖಸ್ಯಾನಂತರಂ ಸುಖಂ' ಎಂಬಂತೆ ಮಂಗಳ ಪ್ರಾಪ್ತಿಯಾಗುವ, ಮತ್ತು ಹಿತ ಪ್ರಸಂಗಗಳು ಲಭಿಸಿದಾಗ 'ಸುಖಸ್ಯಾನಂತರ ದುಃಖಂ' ಎಂಬಂತೆ ಹಿಗ್ಗದೆ ಎಚ್ಚರಿಕೆಯಿಂದ ಇದ್ದು ಅನಿಷ್ಟವನ್ನು ತಡೆಗಟ್ಟುವ ಅಥವಾ ನಿವಾರಿಸಿಕೊಳ್ಳುವ ಪಾಠಗಳನ್ನು ರಾಜನೀತಿಯಿಂದ ತಿಳಿಯಬೇಕಾಗಿದೆ.

ಕೈಕೆಯ ವ್ಯಾವಹಾರಿಕ ರಾಜನೀತಿ ಜ್ಞಾನವು ಶ್ರೀರಾಮನನ್ನು ಮೃತ್ಯುವಿನ ದವಡೆಯಿಂದ ಪಾರುಮಾಡಿತು – ಎಂಬುದು ರಾಜನೀತಿಯಿಂದ ಸಿದ್ಧಾಂತವಾಗಿದೆ. ಈ ವಿಷಯದಲ್ಲಿ ಸಂಶೋಧನೆ ನಡೆದು 'ಶ್ರೀರಾಮಸಂಜೀವಿನೀ ಕೈಕಾ' ಎಂಬ ಗ್ರಂಥವು ಪ್ರ. ಸಾ. ಪ್ರಕಾಶನಕ್ಕೆ ಸಿದ್ಧವಾಗಿದೆ. ಹರಿಶ್ಚಂದ್ರನಿಗೆ ರಾಜನೀತಿ ಜ್ಞಾನವಿಲ್ಲದುದರಿಂದ, ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ತಪಃ ಫಲ

1 ಸುಂದರಕಾಂಡ 13-10, 11) ಅನಿರ್ವೇದ - ಉತ್ಸಾಹ; ನಿರ್ವೇದ- ಉದಾಸೀನಭಾವ, ಆಲಸ್ಯ, ಜಡತ್ವ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವನ್ನು ದಾನವಾಡಿ ಕುತಕಾರ ಮಾಡಲು ಹರಿಶ್ಚಂದ್ರನ ಪಾತ್ರತೆಯನ್ನು ಶ್ರವಣ ಮಾಡಿ ಸ್ವತಃ ಹುಡುಕಿಕೊಂಡು ಬಂದ ವಿಭೂತಿ ಪುರುಷ ವಿಶ್ವಾಮಿತ್ರ ಬ್ರಹ್ಮರ್ಷಿಯ ಮಹಿಮೆಯನ್ನು ತಿಳಿಯದ ಅಥವಾ ತಿಳಿದಿದ್ದರೂ ಹೊಂದಿಸಿ ಕೊಳ್ಳಲು ತಿಳಿವಳಿಕೆಯಿಲ್ಲದ ಮೂರ್ಖನಂತೆ ವರ್ತಿಸಿದನು. ಕಾವ್ಯವನ್ನು ಬರೆದವರೂ ಅವಿವೇಕಿಗಳಂತೆ ವಿಶ್ವಾಮಿತ್ರನನ್ನು ಅಪಶಬ್ದಗಳಿಂದ ಅವಮಾನಿಸಿರುವುದು ಹೇಯವಾದುದು. ತನ್ನ ಜನ್ಮ-ಜಾತಿಯು ಮೇಲೆಂದು ಹೆಮ್ಮೆಯಿಂದ ಇತರ ಜಾತಿಯನ್ನು ತುಚ್ಛವೆಂದು ಮೂದಲಿಸಿದವರ ಪರಿಣಾಮವಾಗಿ ಕೊನೆಗೆ ಅಂತಹ ಜಾತಿಯವನ ಮನೆಯಲ್ಲಿ ಭೃತ್ಯನಾಗಿರಬೇಕಾಯಿತು. ಅಹಂಕಾರವನ್ನು ತ್ಯಜಿಸಿ ಭಗವಂತನ ಸ್ವರೂಪವನ್ನು ಸರ್ವತ್ರ ನೋಡುವ ಮತ್ತು ಉಚ್ಚ ನೀಚಭಾವವಿಲ್ಲದೆ ಸಮತೆಯ ರಾಜನೀತಿಯೋಗದ ಪಾಠವನ್ನು ಅಭ್ಯಾಸಮಾಡಿ ಮನಸ್ಸನ್ನು ಪಳಗಿಸಿದನಂತರ ಯೋಗಿಯಾಗಿ ವಿಶ್ವಾಮಿತ್ರರ ಪಾದಭಕ್ತನಾದನು. ಹೀಗೆ ಹಿಂದಿನ ಯುಗಗಳಲ್ಲಿಯೂ ಸ್ತ್ರೀಯರು ಮೊದಲುಗೊಂಡು ಜನಗಳು ರಾಜನೀತಿಯನ್ನು ಪುರಸ್ಕರಿಸಿ ಶ್ರೇಯೋವಂತರಾಗಿಯೂ ರಾಷ್ಟ್ರವಲಯದ ರಾಜರಾದರೂ ರಾಜನೀತಿಯನ್ನು ಮರೆತು ಸಂಕಟಕ್ಕೆ ಒಳಗಾದವರೂ ಇದ್ದರು

ದೌಷ್ಟ್ಯವನ್ನು ಅಡಗಿಸಲು ಸಾಮದಾನಾದಿಗಳಿಂದ ಆರಂಭವಾದ ರಾಜನೀತಿಯತ್ನವು ದೌರ್ಜನ್ಯದ ಆವರಣದಲ್ಲಿ ಮಾರ್ಗ ತಪ್ಪಿದ ತಂತ್ರಗಳಂತೆ ಕಾಣಬರಬಹುದು. ಒಂದು ಸನ್ನಿವೇಶದಲ್ಲಿ ಕಾರ್ಯ ಕಾರಣಗಳನ್ನು ಭೇದಿಸಿ ತಿಳಿಯದವರು 'ಏನೋ ! ತಂತ್ರ ! (Politics)' ಎಂದುಕೊಂಡು ತಂತ್ರ (Politics) ಎಂದರೆ ತುಚ್ಛವಾದ ವಿಷಯವೆಂಬಂತೆ ಪ್ರತಿಪಾದಿಸುತ್ತಾರೆ. ಅಧರ್ಮ, ಅನೀತಿ, ಮಾಯಾಚಾರಗಳನ್ನು ಎದುರಿಸುವ ಪ್ರಸಂಗಗಳಲ್ಲಿ ಅನೀತಿಗಳ ಸುಲೋಚನದ ಗುಣಕರ್ಮಶಕ್ತಿಗಳಿಗೆ ತಕ್ಕಂತೆ ರಾಜನೀತಿಯು ಕಂಡು ಬಂದರೂ ಅದರ ಸಾಧುತ್ವ, ಸಾಧ್ವಾಚಾರಗಳು ಕಾಲಕ್ರಮದಲ್ಲಿ ಸ್ಪಷ್ಟವಾಗುವುವು– ಎಂಬುದು ಇತಿಹಾಸ ಗ್ರಂಥಗಳಲ್ಲಿ ನಿದರ್ಶನಗಳ ಮೂಲಕ ಸಿದ್ಧಾಂತವಾಗಿರುವುದು. ರಾಜನೀತಿಯು ಸಾರ್ವಕಾಲಿಕವಾಗಿಯೂ ಸಾರ್ವಜನಿಕವಾಗಿ ಸರ್ವತ್ರ ಹಿತಕಾರಿಯಾದ ಸಮತ್ವವುಳ್ಳದ್ದೂ ಆಗಿರುತ್ತದೆ.

'ನೃಪನೀತಿರನೇಕರೂಪಾ' ಎಂದು ಉದಾಹೃತವಾಗಿರುವುದರಿಂದ ಅಸಿಂಧ್ಯವೂ ಅವಧ್ಯವೂ ಆಗಿದೆ ಎಂದು ಭಾವಿಸುವುದು ತಪ್ಪು ತಿಳಿವಳಿಕೆಯ ಫಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನೃಪ – ಮಾನವನನ್ನು ರಕ್ಷಿಸುವ – ರಾಜನೀತಿಯು ಕಾಲ, ದೇಶ, ಪಾತ್ರಗಳ ಸ್ಥಿತಿಗತಿಗಳಿಗನುಗುಣವಾಗಿ ಪ್ರತಿ ಕ್ಷಣದಲ್ಲಿಯೂ ಸಮಯೋಚಿತವಾಗಿ ಶಾಂತಿ ಸಮಾಧಾನ ಪರಿಪಾಲನೆಗಾಗಿ ವೈವಿಧ್ಯವನ್ನು ಹೊಂದಲೇಬೇಕು. ವಿಶ್ವನಾಮ ರೂಪಗಳನ್ನು ಧರಿಸುವ ರಾಜನೀತಿಯು ವೈವಿಧ್ಯದಿಂದಲೇ ವಿಶ್ವವು ನ್ಯೂನತಾತಿರೇಕಗಳನ್ನು ಸಮಕ್ಕೆ ತಂದು ಸುರಕ್ಷಿತವಾಗಿರುವುದು.

ವಿರಾಟ್ ಪುರುಷನ ಜಗತ್ತಿನಲ್ಲಿ ಶ್ರಿಯಾ, ಭಿಯಾ, ಹ್ರಿಯಾ, ಶ್ರದ್ಧಯಾ, ಅಶ್ರದ್ಧಯಾ, ಸಂವಿದಾ ಎಂಬ ವಿವಿಧ ನೀತಿಯಂತೆ ಪ್ರಕೃತಿ ಮಾತೆಯು ಕಾಲ, ದೇಶ, ಪಾತ್ರಾನುಗುಣವಾಗಿ ಜಗತ್ಪಾಲನೆಗೆ ಬೇಕಾದುವುಗಳನ್ನು ದಾನ ಮಾಡುತ್ತಿರುವ ವಿಚಾರವು ಪ್ರತ್ಯಕ್ಷವಾಗಿ ಸರ್ವರಿಗೂ ಸ್ವಾನುಭವಕ್ಕೆ ಬಂದಿರುತ್ತದೆ. ಧರ್ಮವು ಸ್ಥಾಯಿಭಾವವಾಗಿರುತ್ತದೆ. ನೀತಿಯು ನವರಸಗಳಂತೆ ಹೊಸ ಹೊಸ್ತಿ ವಿಚಾರಗಳನ್ನು ರೂಪಿಸುವುದು.

ರಾಜನೀತಿಯೋಗಜ್ಞಾನವಿಲ್ಲದ ಜನಾಂಗದವರು ಜೀವನ ವ್ಯವಹಾರಕ್ಕೆ ವಿರೋಧವಾದ ಗುಣ ಕರ್ಮ ಶಕ್ತಿಗಳ ಪ್ರಯೋಗದಿಂದ ಗುಂಪನ್ನು ಹೆಚ್ಚಿಸಿಕೊಳ್ಳಲು[1] ಯತ್ನಿಸುತ್ತಾರೆ. ಉತ್ತಮವಾದ ಸಾತ್ವಿಕವರ್ಗಕ್ಕೆ ಸೇರಿದ ಅಸ್ತಿಕ ಮಹಾಜನಗಳೂ ಸಹ ರಾಜನೀತಿಜ್ಞಾನ ಮತ್ತು ಅನುಷ್ಠಾನವಿಲ್ಲದೆ ಇರುವುದರಿಂದ ವಿರೋಧಿಗಳನ್ನು ಎದುರಿಸಲಾಗದೆ, ಮೋಹಾದಿಗಳಿಂದ ಅವಿಷ್ಟವಾದ ಇಂದ್ರಿಯಾದಿಗಳ ದೌರ್ಬಲ್ಯದಿಂದ ಅಬಲರಾಗಿ ತಂತ್ರ ಬಲಪ್ರಯೋಗಕ್ಕೆ ಬಲಿಯಾಗುತ್ತಾರೆ. ಮತ್ತು ರಾಜ್ಯದ ಐದು ವಲಯಗಳಿಗೂ ಕಳಂಕಪ್ರಾಯರಾಗಿರುತ್ತಾರೆ. ವಿಶ್ವದ ಭೂ ಪ್ರದೇಶಗಳಲ್ಲಿ ಇಂಗ್ಲೆಂಡ್ ದೇಶದ ಜನರು ತಮ್ಮ ಜನತೆಯ ಮತ್ತು ಆಡಳಿತಗಳ ಅನೇಕ ದುರಂತಗಳನ್ನು ಪ್ರತ್ಯಕ್ಷವಾಗಿ ನೋಡಿಯೂ, ನಾಟಕಾದಿ ಗ್ರಂಥಗಳಲ್ಲಿ ಕಂಡ ಅತ್ಯುತ್ಕಟವಾದ ದುರಂತ ಮನೋಭಾವ ಮತ್ತು ಕೃತ್ಯಗಳನ್ನು ಅಧ್ಯಯನಮಾಡಿಯೂ, ರಂಗಭೂಮಿಯಲ್ಲಿ ನಂದ ಶಿಸಿಯೂ ತಿಳಿದುಕೊಂಡು ಸಹನೆ, ದೀರ್ಘಾಲೋಚನೆ ವಿವೇಚನೆಗಳಿಂದ – ಸನ್ನಿವೇಶವನ್ನು ತಮಗೂ, ತಮ್ಮನ್ನು ಸನ್ನಿವೇಶಕ್ಕೂ ಹೊಂದಿಸಿಕೊಳ್ಳುವ ಗುಣವನ್ನು ಅಭ್ಯಾಸಮಾಡಿದವರಂತೆ ವರ್ತಿಸುತ್ತಾರೆ. ಭಾರತದ ವಿವಿಧ ಪ್ರದೇಶ

1 ಅಣು ವಿಚ್ಛೇದನ ಪ್ರಸಂಗವೂ ಇದಕ್ಕಾಗಿಯೇ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳ ದುಃಸ್ಥಿತಿಯನ್ನು ಹೋಗಲಾಡಿಸಲು ನೆರವಾದಂತೆ ಯತ್ನಿಸಿ, ವಿಶಾಲವೂ ಫಲವತ್ತಾದುದೂ ಆದ ಭಾರತ ರಾಷ್ಟ್ರದ ಅವಲಂಬನವನ್ನು ಸಂಪೂರ್ಣವಾಗಿ ಹೊಂದಿ ವಿಶ್ವದಲ್ಲೆಲ್ಲಾ ಆದರ್ಶರಾದ ತಂತ್ರ ನಿಪುಣರೆಂದು ಹೊಗಳಿಸಿಕೊಂಡರು. ಕ್ರಿಸ್ತ– ದಿನಗಣನೆಯನ್ನು ವಿಶ್ವದ ಮೇಲೆ ಹೊರಿಸಬೇಕೆಂದು ಯತ್ನಿಸುತ್ತಿದ್ದಾರೆ. ಇದಕ್ಕೆ ವಿರೋಧಿಯಾದವರು ಸದಾ ಹೃದಯದಲ್ಲಿ ಶಪಿಸುವುದನ್ನೂ ಅದರಿಂದಾಗುವ ಕೆಡಕನ್ನೂ ಊಹಿಸುವಷ್ಟು ರಾಜನೀತಿಯು ಅವರಿಗೆ ಗೋಚರವಾಗಲಿಲ್ಲ. ರಾಜನೀತಿಯು ಯೋಗವು ಅವರ ಹೃದಯವನ್ನಲ್ಲಿ ಅಂಕುರಿಸಿರಲಿಲ್ಲವೆಂಬುದು. ಪರರ ಶ್ರೇಯಸ್ಸಿನಲ್ಲಿ ಅವರಿಗಿರುವ ಅಸಹನೆ ರೂಪದಲ್ಲಿ ಸ್ಪಷ್ಟತೆ ಪ್ರಕಟವಾಯಿತು. ಅವರಿರುವ ಭೂ ಭಾಗಗಳೇ ಬ್ರಾಹ್ಮಣ ದೇಶಕ್ಕೆ ಮೂಲವೆಂದು ಆಡಳಿತ ಮತ್ತು ತಂತ್ರದ ಬಲದಿಂದ ಹೇಳತೊಡಗಿದರು. ಬ್ರಾಹ್ಮಣ–ಉಡಿಗೆ ತೊಡಿಗೆಗಳ ವೇಷವನ್ನು ಧರಿಸಿ ಪೋರ್ಚುಗೀಸರು ತಾವು ಪೋರ್ಚುಗೀಸ್ ಬ್ರಾಹ್ಮಣರೆಂದು ಹೇಳಿಕೊಂಡು ಬುದ್ಧಿಭೇದವನ್ನು ಉಂಟುಮಾಡಿದರು [1]

ರಾಜನೀತಿಯಿಂದ ತಿಳಿಯಬರುವಂತೆ ಈ ಬಗೆಯ ಸ್ವಾರ್ಥ, ಮೋಹ, ವಂಚನೆಗಳಿಂದ ಕೂಡಿದ ಅವರ ವರ್ತನೆಗಳು ಅವರಿಗೇ ವಿಧಿಸಿದ ಶಿಕ್ಷೆಗೂ ಒಳಗಾದರು.

ತಿನವೊಗ್ಗದಲ್ಲಿ ಅನ್ಯ ಮತದವರು ಭೇದೋಪಾಯ ಕ್ಷೇತ್ರವೆಂಬಂತೆ ಬಾಲಕಿಯರ ಶಾಲೆಗಳನ್ನು ತೆರೆದು ಓದುವರ ಮನೋಭಾವವನ್ನು ಪರಿವರ್ತಿಸಿ ಭಾರತ ಸಂಸ್ಕೃತಿಯನ್ನು ಕೆಡಿಸುವ ಪ್ರಯತ್ನದಲ್ಲಿ ಆಂದೋಳನಕ್ಕೆ ಕಾರಣರಾದರು. ರಾಜನೀತಿಯು ಕವಚವನ್ನು ಧರಿಸಿ ಜಾಗರೂಕರಾಗಿರುವಂತೆ ರಾಜ

1 ಮಿ॥ ಜ್ಯಾ ಹಿಗಿನ್ಸ್, ಎಂ.ಎ. (ಅಮೆರಿಕ) ಅವರು, ಸಂಕುಚಿತವಾಗಿ ಕರ್ನಾಟಕ ಶಬ್ದದಿಂದ ಸೂಚಿಸಲ್ಪಡುವ ಸಂಸ್ಕೃತ ಸಂಗೀತಾಭ್ಯಾಸಕ್ಕಾಗಿ ಅನುರೂಪವಾದ ವೇಷ, ಭೂಷಣ ಆಹಾರಗಳನ್ನು ಕೈಗೊಂಡಿರುವುದು ಶ್ಲಾಘನೀಯ. ಆದರೆ ಅವರ ಹೆಸರು– ವರ್ತನೆಗಳು, ಸಂಗೀತಕಲಾರ್ಜನವು ಮುಗಿದನಂತರ ಅನುಸರಿಸುವ ಜೀವನ – ಆಚಾರ ಮಾರ್ಗವು ಇವರ ರಹಸ್ಯವನ್ನು ಕಾಲಾನುಕ್ರಮದಲ್ಲಿ ಹೊರಗೆಡಹುವುದು ಎಂದು ರಾಜನೀತಿಯ ಮಿತಿಯಲ್ಲಿ ತಿಳಿಯಬೇಕು. ಹೀಗೆಯೇ ಹಿಂದು, ಇಂಡಿಯ ಮೊದಲಾದ ನಾಮಗಳು ಸಂಸ್ಕೃತಿಯ ವಿರೂಪಕ್ಕೆ ಕಾರಣವಾಗಿವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನೀತಿ ಗ್ರಂಥಗಳಾಗಲೀ ಜನತೆಯಲ್ಲಿ ಐಕಮತ್ಯವಾಗಲೀ ಇಲ್ಲದೆ ಭಾರತೇಯರು ಅನಂತ ಶಿಕ್ಷಣಕ್ರಮ, ಶಿಸ್ತು, ವೇಷ, ವಾಹನಾದಿಗಳ ಸೌಕರ್ಯ ಇವೆಲ್ಲವೂ ಕುಹಕ, ಕುತಂತ್ರಗಳ ಬೆರಗೆಂಬ ತಿಳಿಯದೆ, ತಿಳಿಯಲಾರದೆ ಮರುಳಾಗಿ ಸಂಪ್ರತನಾನ ಜೀವನವನ್ನು ಹಾಳುಮಾಡಿಕೊಂಡರು. ಅಲ್ಲದೆ ಭಾರತ ಸಂಸ್ಕೃತಿಯನ್ನು ಶತ್ರುಗಳಂತೆ ಸ್ವತಃ ಪ್ರತಿಭಟಿಸಿ ರಾಷ್ಟ್ರಕ್ಕೂ ರಾಷ್ಟ್ರದ ಐಕ್ಯಕ್ಕೂ ಕಂಟಕರಾದರು.

ಸ್ವಯಂ ರಾಜರಾಗಿದ್ದು ಪ್ರಜೆಗಳಾಗಿ ವರ್ತಿಸುವ ಜನಗಳ ನೈಸರ್ಗಿಕವಾದ ಸ್ವಾತಂತ್ರ್ಯವನ್ನು ರಾಜನೀತಿ ಜ್ಞಾನವಿಲ್ಲದ ಪ್ರಭುತ್ವವು ಅಪಹರಿಸಿದಾಗ ಒಳಗೆ ಹುದುಗಿರುವ ರಾಜನೀತಿಯ ಫಲಾನುಭವವು ಹೊರ ಹೊಮ್ಮಿ ಸ್ವಾತಂತ್ರ್ಯಕ್ಕೆ ಹೋರಾಟದ[1] ಸ್ಥಿತಿಯು ಕಲ್ಪಿತವಾಗುವುದು. ಈ ಹೋರಾಟಕ್ಕೆ ರಾಜನೀತಿ ಜ್ಞಾನವಿಲ್ಲದವರು ನಡೆಸುವ ಮುಷ್ಕರಾದಿಗಳೆಂಬ ಸಾಕ್ಷಾತ್ ವಿರೋಧ ಪ್ರದರ್ಶನವು ಅಶಕ್ತರೂ ಅಜ್ಞಾನಿಗಳೂ ಆದ ಮಕ್ಕಳ ಮೊಂಡಾಟದಂತೆ ಒಳಿತಾಗದ ಅನೀತಿ ಮಾರ್ಗವಾಗುವುದು. ಇದು ಸ್ವೋನ್ನತಿಗೂ ದೇಶಾಭ್ಯುದಯಕ್ಕೂ ಕಂಟಕವಾಗುವುದು. ಈ ಬಗೆಯ ಪ್ರಸಂಗಗಳು ಭಾರತೇತರ ದೇಶಗಳಲ್ಲಿ ಅಂಕುರಿಸಿ ಹರಡುತ್ತಾ ಭಾರತವನ್ನು ಪ್ರವೇಶಿಸಿರುತ್ತದೆ.

(ಮೊಂಡಾಟ) ಮುಷ್ಕರಾದಿಗಳು ಚಿಗುರುವಂತೆ ವ್ಯವಸ್ಥೆ-ಆಡಳಿತಗಳಲ್ಲಿ ಲೋಪ ದೋಷಗಳನ್ನು ತಂದು ಒಡ್ಡುವುದು! ಅನಂತರ ಮುಷ್ಕರಕ್ಕೆ ತಲೆಬಾಗಿ ಆಡಳಿತವನ್ನು ರೂಪಿಸುವುದು!! ಇವೆಲ್ಲವೂ ರಾಜ್ಯಭಾರವೆನಿಸುವುದಿಲ್ಲ; ಆಶ್ರಿತಜನಕ್ಕೂ ಆಡಳಿತಕ್ಕೂ ಉಪ್ಪೇಗವನ್ನುಂಟುಮಾಡುವ ವ್ಯಾಪಾರ! ಈ ರಾಜನೀತಿಯ ಪ್ರಾಥಮಿಕ ಪಾಠವು ಪಂಚರಾಜ್ಯವಲಯಗಳಿಗೂ ಅನ್ವಯಿಸುವುದು

ಆಶ್ರಿತಪ್ರಜೆಗಳ ಮನೋಭಾವ ಮತ್ತು ವರ್ತನೆಗಳ ನಾಡಿಯನ್ನು ಹಿಡಿದು, ಬದಲಾವಣೆಗಳ ಸಾಧುತ್ವ, ಅಸಾಧುತ್ವ ವಿಚಾರಗಳನ್ನು ಪರೋಕ್ಷವಾಗಿ ಅವರ ಗಮನಕ್ಕೆ ತಂದು ಅಂತರಂಗಕ್ಕೆ ಅವರನ್ನು ತಂದುಕೊಳ್ಳಬೇಕು. ರಾಜ್ಯಭಾರಕ್ಕೆ

೧ ಅಮೆರಿಕದಲ್ಲಿ ಸ್ವಾತಂತ್ರ್ಯಕ್ಕಾಗಿ ಅದ್ಭುತವಾದ ಹೋರಾಟ ನಡೆಯಿತು. ಮಹೀಸೂರ ದೇಶದಲ್ಲಿಯೂ ಆಡಳಿತವು ಜನರಿಂದ ಎದುರಿಸಲ್ಪಟ್ಟಿತು. ಇದು ವಿವೇಕ ಶೂನ್ಯತೆಯನ್ನು ಸೂಚಿಸುವುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸರ್ವರೂ ಹೊಣೆ ಎಂಬ ನೀತಿಯು ಇದರಿಂದ ಬೆಳಗಿವುದು ಬದಲಾವಣೆಗಳು ಆಡಳಿತದಲ್ಲಿ ನ್ಯೂನತಾತಿರೇಕಗಳಾಗದಂತೆ ಆಡಳಿತಗಾರರು ಈ ಗುಣಗಳನ್ನು ಕಾರ್ಯ ರೂಪಕ್ಕೆ ತರಬೇಕು. ಸಂಸ್ಥೆಯ-ದೇಶದ-ಆಡಳಿತ ಮಾಡುವವರೂ ಆಡಳಿತಕ್ಕೆ ಒಳಪಟ್ಟವರೂ ಸಮಾನರಾಗಿದ್ದು ಪರಸ್ಪರ ಬೇರೆಯಾಗಿಲ್ಲವೆಂತಲೂ ಆಡಳಿತ ನಿರ್ವಾಹದಲ್ಲಿ ಸಮಾನವಾದ ಕಾರ್ಯಭಾರವನ್ನು ಹೊತ್ತಿರುವರೆಂತಲೂ ತಿಳಿಯಬೇಕು.

ಬುದ್ಧನ ಪರೋಪಕಾರ ತತ್ವಗಳನ್ನೂ ಅಹಿಂಸೆಯನ್ನೂ ಅಶೋಕನಂತೆ ಅಂಗೀಕರಿಸಿ ಅದಕ್ಕೆ ಪೂರ್ಣ ವಿರೋಧವಾದ ರಾಜ್ಯಪದ್ಧತಿಯನ್ನು ಕಾರ್ಯ ರೂಪಕ್ಕೆ ತಂದ ಮತ್ತು ಅದಕ್ಕೆ ಅವಕಾಶ ಕೊಟ್ಟ ಬುದ್ಧಾನುಯಾಯಿಗಳು ರಾಜನೀತಿಯನ್ನು ತಿಳಿಯದೆ ಆಚಾರ್ಯ ಬುದ್ಧನಿಗೆ ಉಚಿತವಾದ ಕಾಣಿಕೆಯನ್ನು ಸಲ್ಲಿಸುತ್ತಿಲ್ಲವೆಂದು ಕಾಣಬರುತ್ತದೆ.

ತತ್ವಶಾಸ್ತ್ರದಲ್ಲಿ ತಮಗಿರುವ ಜ್ಞಾನವು ಅಪೂರ್ಣವಾಗಿದ್ದರೂ, ಅವರ ಮತಾಚಾರವು ಸಂಸ್ಕೃತಿಯ ಸೋಪಾನಗಳನ್ನು ಸಮಿಾಪಿಸದೆ ಇದ್ದರೂ ಅದನ್ನು ಮರೆ ಮಾಡಿ ಪ್ರಪಂಚದ ಜನಗಳನ್ನೆಲ್ಲಾ ಸಂಕುಚಿತವಾದ ತಮ್ಮ ಮತಾಚಾರದ ಗುಂಪಿಗೆ ಸೇರಿಸುವ ಚಳುವಳಿಯು ರಾಜನೀತಿಯಿಂದಲೇ ದಮನವಾಗಬೇಕಾಗಿದೆ. ಈ ದಮನಕಾರ್ಯಕ್ಕೆ ಸಾಮರ್ಥ್ಯವಿಲ್ಲದೆ ಅಶಕ್ತತೆಯಿಂದ ಚಳುವಳಿಯ ಮೋಹಕ್ಕೆ ಬಲಿಯಾಗಿ ಭಾರತೀಯರೂ ಅನ್ಯಮತದವರೂ ಪಕ್ಷಪಾತ ಭಾವನೆಯನ್ನೇ ದಿನೇ ದಿನೇ ವೃದ್ಧಿಪಡಿಸಿಕೊಳ್ಳುವುದು ಕ್ಷೇಮಸ್ಕರ.

ಸರ್ವಾಂತರ್ಯಾಮಿಯು ಬ್ರಹ್ಮಾಂಡ ಮತ್ತು ಪಿಂಡಾಂಡಗಳ ನಾಮ ರೂಪಗಳಲ್ಲೆಲ್ಲಾ ಇರುವುದನ್ನು ಗ್ರಹಿಸುವ ಯೋಚನೆಯೇ ಇಲ್ಲದೆ ಋಣವನ್ನು ತೀರಿಸುವ ರೀತಿಯಲ್ಲಿ ಕೇವಲ ಪ್ರಾರ್ಥನೆಯು ಉಚ್ಚಾರಣೆಗಾಗಿ ಗೊತ್ತಾದ ದಿನಗಳಲ್ಲಿ ಗುಂಪುಕೂಡುವ ನಿಯಮಗಳ ಪಾಲನೆಯಿಂದ ಉಂಟಾಗುವ ದೇವತಾ ಪ್ರಸಾದವು ಕೇವಲ ಸಾಮಾನ್ಯವಾದುದೆಂದು ಗೊತ್ತಾಗುವುದು. ಭಗವಂತನ ಲೀಲೆಯನ್ನೂ ದೇವರು ಮತ್ತು ಪ್ರಜೆಗಳ ವಿಷಯದಲ್ಲಿ ಮಾನವರು ಎಲ್ಲಿ ಹೇಗೆ ವರ್ತಿಸಬಹುದೆಂಬುದನ್ನೂ ಹೇಳಿದ ಉಪದೇಶಕನನ್ನು ಮೃತ್ಯುವಿನೆ ಗುರುಮಾಡಿ ಅದಕ್ಕೆ ಸಂಬಂಧಿಸಿದ ದುರಂತಸೂಚಕವಾದ ಮೃತ್ಯು ಚಿಹ್ನೆಯನ್ನು ಧರಿಸುವ ಆಚಾರವುಳ್ಳವರ ಮಟ್ಟವು ಕೆಳಗಿನದೆಂಬುದನ್ನು ಮರೆತು ಉನ್ನತ ಭಾವನೆ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸದಾಚಾರ ಸಂಸ್ಕೃತಿಗಳಿಗೆ ಅಧಿಕಾರ ಹೊಂದಿದ ಜನಾಂಗದವರ ಮನೋಭಾವ ವನ್ನು ತಂತ್ರ, ಕುತಂತ್ರ, ಕುಹಕಗಳ ಅನುನಯದಿಂದ ಮೋಹಗೊಳಿಸಿ ಪರತಾಂತರಕ್ಕೆ ಪರಿವರ್ತಿಸಲು ಸತತ ಪ್ರಯತ್ನ ಮಾಡುತ್ತಾರೆ. ಈ ಕರ್ಮವೇ ತಪ್ಪು ಶಿಕ್ಷಣವನ್ನು ಕೊಡುವುದು. ಇಂತಹವರನ್ನು ದೂರದಲ್ಲಿ ನಿಲ್ಲಿಸಿ, ಪಾಠ ಕಲಿಸಲು ವ್ಯವಸ್ಥೆ ಮಾಡುವಷ್ಟು ರಾಜನೀತಿಜ್ಞಾನದ ಬಲವಿಲ್ಲದವರಾದ ಆಸ್ತಿಕರು ಅವರ ತಂತ್ರದ ಬಲೆಗೆ ಸಿಕ್ಕಿಕೊಂಡು ಜನಾಂಗದ ನಷ್ಟವನ್ನು ಅನುಭವಿಸಬೇಕಾಗಿರುತ್ತದೆ – ಎಂಬುದು ರಾಜನೀತಿ ಹೃದಯಕ್ಕೆ ಶೂಲವಾಗಿ ರುತ್ತದೆ.

ಆಯಾ ಜನಾಂಗದವರ ಮತ್ತು ಪ್ರತಿ ವ್ಯಕ್ತಿಯ ಸಂಸ್ಕಾರ, ಗುಣ ಕರ್ಮ ಶಕ್ತಿಸಾಮರ್ಥ್ಯಗಳಿಗೆ ತಕ್ಕಂತೆ ದೇಹಿಗಳು ದೇವತಾನುಸಂಧಾನವನ್ನು ಅಳವಡಿಸಿಕೊಳ್ಳಬೇಕು. ಎಲ್ಲರೂ ಎಲ್ಲ ದೇವತೆಗಳ ಆರಾಧನೆಗಳನ್ನು ಮಾಡುವ ಸಂಭವವಿರಲಾರದು. ಒಂದೇ ಬಗೆಯ ದೇವತಾರಾಧನೆಯು ಅನೇಕ ವ್ಯಕ್ತಿಗಳ ಸಮೂಹಕ್ಕೆ ಹೊಂದುವುದಿಲ್ಲ. ಈ ರಹಸ್ಯವನ್ನು ಭೇದಿಸಿ ತಿಳಿಯಲು ದಿವ್ಯ ವಾದ ರಾಜನೀತಿ ಜ್ಞಾನವು ಅತ್ಯವಶ್ಯವು. ಎಲ್ಲಾ ಶಾಸ್ತ್ರಗಳ, ಆಚಾರಗಳ ಅಂತಿಮ ಗುರಿ ಒಂದೇ ಆದರೂ ಒಂದೊಂದು ಶಾಸ್ತ್ರವು ಒಂದೊಂದು ವಿಷಯ ವನ್ನೂ ಒಂದೊಂದು ಮಾರ್ಗವನ್ನೂ ವಿಸ್ತಾರವಾಗಿ ಬೋಧಿಸಬಹುದು. ಈ ಬಗೆಯ ಕ್ಲಿಷ್ಟ ಪರಿಸ್ಥಿತಿಗಳ ಪ್ರಸಂಗವೇ ಬೇಡವೆಂದು ಉದಾಸೀನರಾಗುವ ಜನ ಗಳಿಗೆ ಉಂಟಾಗಬಹುದಾದ ಅಪರಾಧವ ಫಲಕ್ಕೆ ಅಜುವ ದೇಹಿಗಳು ತಾಟ ಸ್ಥ್ಯವೆಂಬ ಅಪರಾಧವನ್ನೆಸಗಲಾರರು. ಭಾವಾನೇಶಗಳಿಗೆ ಒಳಗಾಗಿ, ದುಡುಕಿ, ಅನುರೂಪವಾದುದೆಂದು ತಿಳಿಯದೆ ಆಚರಿಸುವ ಕ್ರಮಗಳು – ಜೀವನದ ಮರ್ಮವನ್ನು ತಿಳಿಯದೆ ಉಪಯೋಗಿಸುವ ಅಸ್ತ್ರ ಆಯುಧ – ಅಣುವಿಚ್ಛೇದನ ಪ್ರಯತ್ನ – ಗಳಂತೆ ಅಸ್ತವಿಹತವಾದ ಘೋರ ಶಿಕ್ಷೆಯನ್ನು ವಿಧಿಸುವುದು ಆಮೂಲಾಗ್ರದಿಂದ ಅನೇಕ ಶಾಸ್ತ್ರೋಕ್ತಿ ಮತ್ತು ಜೀವನದ ಅನುಭವಗಳ ಮಹತ್ವವು ಅಪವರ್ತನವಾದ ರಾಜನೀತಿಯಿಂದ ಅಪವರ್ತ್ಯನಗಳೆನಿಸುವ ಅನುಸಂಧಾನ ಗಳನ್ನು ಅವಲಂಬಿಸಬೇಕಾಗುವುದು.

ನರಸಿಂಹ, ಕಾಳಿ ಮೊದಲಾದ ದೇವತೆಗಳನ್ನು ಇಂದ್ರಜಾಲಾದಿ ತಂತ್ರ ಗಳ ಭೂತವಿದ್ಯೆಯನ್ನೂ ಅನಧಿಕಾರಿಗಳು ಪರಿಗ್ರಹಿಸಲು ಅಸಮರ್ಥರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದುರಂತ ಚಿಹ್ನೆಯನ್ನು ದೇವರೆಂದು ಆರಾಧಿಸುವವರು ದುರಂತ ಸಾಕ್ಷಿತ್ವಾರೆವನ್ನು ವಾಡಿಕೊಂಡು ಕಾವ್ಯ, ನಡೆ, ನುಡಿಗಳಲ್ಲಿ ದುರಂತಗಳನ್ನು ಪ್ರಕಾಶ ಪಡಿಸುವವರಾಗುತ್ತಾರೆ. ದುಷ್ಟ ಶಿಕ್ಷಣ, ಶಿಷ್ಟ ರಕ್ಷಣಗಳ ಸೂಚಕವಾದ ಶೂಲ, ಗದಾ, ಚಕ್ರಗಳನ್ನು ಶಾಂತಿ-ಆನಂದ ಸೂಚಕ ಪದ್ಮ, ಚಂದ್ರಾದಿಗಳನ್ನು ದೇವತಾ ಚಿಹ್ನೆಗಳನ್ನಾಗಿ ಆರಾಧಿಸುವವರು ಆನಂದ, ಮಂಗಳವನ್ನೇ ಆದಿ ಮಧ್ಯಾಂತಗಳಲ್ಲಿ ಅನುಭವಿಸುವವರೆಂಬುದನ್ನು ರಾಜನೀತಿಯ ಅಧ್ಯಯನದಿಂದ ಬಹು ಸುಲಭವಾಗಿ ತಿಳಿಯಬಹುದು.

ಭಾರತ ರಾಷ್ಟ್ರದ ವಿಪ್ರಜ್ಞರು ರಾಜನೀತಿಯನ್ನು ತಿಳಿಯದೆಯೋ, ರಾಜನೀತಿ ಜ್ಞಾನ ಮಹಿಮೆಯಿಂದಲೋ ಭಾರತ ಸಂಸ್ಕೃತಿ, ಧರ್ಮ, ರಾಜನೀತಿಗಳ ರಹಸ್ಯವನ್ನು ತಿಳಿಸದೆ ಇರುವ ಅಥವಾ ಉಪರಿಪ್ಲವವಾಗಿ ತಿಳಿಸಿರಬಹುದಾದ ವಿಷಯಗಳನ್ನು ಕೇಳುವುದಲ್ಲದೆಂದು ಅನುಕರಣೆಯ ಮಾಡುವ ಆಡಂಬರದಿಂದ ಪ್ರಕಾಶಪಡಿಸಿರುವ ಪರಕೀಯರು ರಾಜನೀತಿ ಪರೀಕ್ಷೆಯಲ್ಲಿ ವಿಫಲರಾಗಿ ಉರುಳಿರುವುದು ಸ್ಪಷ್ಟವಾಗಿದೆ. ಮಧುರೆ, ತಿನ್ನವೆಲ್ಲಿಯಲ್ಲಿ ನಡೆದ ಪ್ರಸಂಗದಲ್ಲಿ, "ಮತಾಂತರ ಸ್ವೀಕಾರವೆಂಬ ಮೋಹವನ್ನು ಬಿಡಬೇಕೆಂ"ದು ಶ್ರೀ ಶ್ರೀ ಶೃಂಗಗಿರಿ ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳು ವಿವರಿಸಿರುವ ರಾಜನೀತಿಯು ವಿಶ್ವಸ್ತುತ್ಯವಾಗಿ, ವಿಶ್ವಾದರಣೀಯವಾಗಿರುತ್ತದೆ.

ದೇವತೋಪಾಸನೆ, ವ್ರತಾದಿಗಳ ಸಂಗ್ರಹ, ಅನುಷ್ಠಾನ, ಕುಲದೇವತಾ ಇಷ್ಟದೇವತಾ, ಪಂಚಾಯತನ ದೇವತಾ ಆರಾಧನೆಗಳು, ಮಂತ್ರಶಾಸ್ತ್ರ, ಆಗಮಶಾಸ್ತ್ರ ಇತ್ಯಾದಿಗಳ ರಹಸ್ಯವನ್ನು ರಾಜನೀತಿಯ ಮಿತಿಯಲ್ಲಿ ತಿಳಿಯಲಾಗುವುದೇ ಹೊರತು ಅನುಷ್ಠಾನ-ಆಚರಣೆ-ವರ್ತನೆಗಳಲ್ಲಿ ಕಂಡುಬರುವ ಅಥವಾ ಸಂಭವಿಸಬಹುದಾದ ನ್ಯೂನತಾತಿರೇಕಗಳ ಮೌಢ್ಯವನ್ನು ನಿವಾರಿಸಲಾಗುವುದಿಲ್ಲ. ದರ್ಶನ ಶಾಸ್ತ್ರಗಳನ್ನು ಅಧ್ಯಯನ ಮಾಡುವವರೂ ಆಚಾರ್ಯ ಪಂಥದವರೂ ಈ ಅಂಶವನ್ನು ಪ್ರಧಾನವಾಗಿ ತಿಳಿದು ಶಾಂತಿ ನೆಲಸುವುದಕ್ಕೆ ಅವಕಾಶ ಕಲ್ಪಿಸಬೇಕು. ಸೃಷ್ಟಿ ಸ್ಥಿತಿ ಲಯಗಳಿಗೆ ಪರಸ್ಪರ ಹೆಣೆದುಕೊಂಡಿರುವ ಜ್ಞಾನ, ಭಕ್ತಿ, ಕರ್ಮಗಳು ಒಂಟಿಯಾಗಿರಲಾರವು; ಸನ್ನಿವೇಶ ಪರಿಸ್ಥಿತಿಗಳಿಂದ ಯಾವುದಾದರೊಂದು ಮಾತ್ರ ಹೊರಗೆ ಕಾಣಿಸಬಹುದಾದರೂ ಉಳಿದೆರಡೂ ಪೋಷಕವಾಗಿ ಅಥವಾ ಆಧಾರವಾಗಿ ಅಡಕವಾಗಿರುವುವು ಎಂಬುದನ್ನು ಎದಿಗೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸುಖಿಯನ್ನಾಗಿಯೂ, ಸ್ವಧರ್ಮ ಕುಸ್ಸವಾದ ವಾಗಾಡಂಬರದ ಚರ್ಚೆಗೆ ಅವಕಾಶ ಕೊಡಬಾರದೆಂಬಂತೆಯೂ ರಾಜನೀತಿಯ ಶಾಸನವಾಗಿರುವುದು.

೮

ಪರಬ್ರಹ್ಮನ ಬ್ರಹ್ಮಾಂಡದ ಋತ ಕ್ಷೇತ್ರಗಳು ತದಂತರ್ಗತವಾದ ಪಿಂಡಾಂಡದಲ್ಲಿ ಅನಿಚ್ಛೆನ್ನವಾಗಿ ಕ್ಷೇತ್ರಜ್ಞನ ಮಿತಿಯಲ್ಲಿ ನಡೆಯುವ ವ್ಯಾಪಾರಗಳಾಗಿವೆ – ಎಂದು ತಿಳಿದು ನಿಷ್ಠೆಯಿಂದ ಕೂಡಿ ನಡೆಸಿದ ಅನುಷ್ಠಾನವೇ ರಾಜನೀತಿಯ ಫಲ. ಶಾರೀರಕ ವಿಮರ್ಶಾಂಸನ್ಯೆ ಮೂಲಾಧಾರವಾದ ಭರತೀಯ ವೈದ್ಯಶಾಸ್ತ್ರ, ಚಿಕಿತ್ಸೆ ಮತ್ತು ಯೋಗಶಾಸ್ತ್ರಗಳಿಂದ ಸರ್ವಾರ್ಥ ಸಿದ್ಧಿಗೆ ಆಶ್ರಯವಾದ ಶರೀರವು ಧರ್ಮಸಾಧನವಾಗಿರುತ್ತದೆ. ತಾನೇ ತಾನಾಗಿ ನಡೆಯುವ ಅಮೃತ ವ್ಯಾಪಾರಗಳಿಗೆ ಆಶ್ರಯವಾದ ಶರೀರದ ಸೌಂದರ್ಯಾದಿ ಗುಣಗಳನ್ನು ಗಮನಿಸದೆ ರಕ್ತಮಾಂಸಾದಿಗಳಿಂದ ಕೂಡಿದ ಶರೀರವು ಹೇಯವೆಂದು ಹೇಳುವುದು ಪರಮಾತ್ಮನ ಸೃಷ್ಟಿ ಲೀಲೆಗೆ ಅವಿಧೇಯತೆಯನ್ನು ಸೂಚಿಸಿದಂತಾಗಿ ರಾಜನೀತಿಗೆ ವಿರೋಧವಾಗುವುದು.

ನಿತಿ ವಿಚಾರಿ ಸಂಗ್ರಹಿಸಿದ ಧನಕನಕಾದಿಗಳನ್ನು ಕಾಪಾಡುವ ಹೊಣೆಗಾರಿಕೆಯು ಮಾತ್ರ ಕೋಶಾಗಾರದ ಪಾಲಕರಂತೆ ಧನಿಕರಿಗೆ ಸೇರಿದುದು. ದಿನಂ ಪ್ರತಿಯ ವ್ಯವಹಾರಗಳಲ್ಲಿ ಪ್ರಜೆಯು ಸಾಮಾನ್ಯವಾಗಿ ಅನುಭವಿಸ ಬಹುದಾದ ಅನ್ನ ಬಟ್ಟೆ ನಿದ್ದೆಗಳಿಗೆ ಮಾತ್ರ ಪ್ರಜೆಗಳಿಗಿರುವಂತೆ ಅಧಿಕಾರವುಳ್ಳ ಧನಿಕನಿಗೂ ಅನೇಕನೇಳೆ ಶಾಂತಿಯು ಅವಶ್ಯವಾಗಿ ಅನಾರೋಗ್ಯವು ಉಂಟಾಗುವುದು ಯಂತ್ರೋಪಕರಣ ಭೂಯಿಷ್ಠವಾದ – ಯಂತ್ರಮಯ – ದೇಶಗಳಲ್ಲಿ ಯಂತ್ರಾಧಿಕಾರಿಗಳ ಸಮೂಹವೂ ಯಂತ್ರೋದ್ಯಮದಲ್ಲಿ ನಿಯುಕ್ತರಾದವರೂ ಆರೋಗ್ಯ-ಸುಖಸಿದ್ಧಿ – ಏನೆಂಬುದನ್ನು ತಿಳಿಯಲು ಅವಕಾಶವಿಲ್ಲವೆಂದು ಹೇಳಿರುತ್ತಾರೆ. ಇವೆಲ್ಲವೂ ಸ್ವತಃ ಆರೋಪಿಸಿಕೊಂಡ ಬಂಧನಗಳು; ಆದರೆ ಕ್ಷೇತ್ರಜ್ಞನ ಸಂಕಲ್ಪಾನುಗುಣವಾಗಿ ಇವು ಅನುಭವಕ್ಕೆ ಬರಲೇಬೇಕು. ವಿವೇಕವನ್ನು ತಂದುಕೊಂಡು, ಇಂತಹ ಬಂಧನಗಳಿಗೆ ಅವಕಾಶವಿಲ್ಲದಂತೆಯೂ ಮುಂದೆ ಸಂಭವಿಸಬಹುದಾದ ಬಂಧನಗಳನ್ನು ತಪ್ಪಿಸಿಕೊಳ್ಳುವುದಕ್ಕೂ 'ಶರೀರಮಾದ್ಯಂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಖಲು ಧರ್ಮಸಾಧನಂ' ಎಂಬಂತೆ ಶ್ರೇಯಸ್ಸಿಗೆ ಶ್ರಮಿಸಲು ಆರೋಗ್ಯಭಾಗ್ಯವುಳ್ಳ ಶರೀರವೊಂದೇ ಸಾಧನವು. ಪರಮಾತ್ಮನ-ಪ್ರಕೃತಿಯ-ವಿಶ್ವದ-ಋತ ಕ್ಷತ್ರಗಳ ನಿಯಮವಂತೆ ಶರೀರದ ಅಂಗಗಳೂ ಅವಯವಗಳೂ ಇಂದ್ರಿಯಗಳಿಗೂ ಮನಸ್ಸಿಗೂ ಅತೀತವಾಗಿರುವ, ಭಾರತೀಯ ವೈದ್ಯಶಾಸ್ತ್ರೋಕ್ತವಾದ, ಸೂಕ್ಷ್ಮವಾದ ರಾಜನೀತಿಯ ಮಿತಿಯಲ್ಲಿ ಕೆಲಸ ಮಾಡುವುವು. ದೇಹಿಯಾದವರು ಶರೀರಾಂತರ್ವರ್ತಿ ವ್ಯಾಪಾರಗಳಿಗೆ ಧಕ್ಕೆ ಬರದಂತೆ ತಮ್ಮ ಪರ್ತನೆಗಳನ್ನು ಹೊಂದಿಸಿಕೊಳ್ಳಬೇಕು ಈ ಬಗೆಯ ಪರ್ತನೆಗಳು ಭಾರತೀಯ ವೈದ್ಯಶಾಸ್ತ್ರದಲ್ಲಿ ಸರಳವಾಗಿಯೂ ಸುಲಭವಾಗಿಯೂ ಹೇಳಲ್ಪಟ್ಟಿವೆ. ಇವುಗಳನ್ನು ಅಳವಡಿಸಿಕೊಳ್ಳುವುದರಿಂದ ಯೋಗಾಭ್ಯಾಸದ ಶಾಂತಿ ಸಮಾಧಿಫಲಗಳನ್ನು ಶರೀರಿಯು ಸದಾ ಹೊಂದಬಹುದಾಗಿರುತ್ತದೆ. ಪಾಶ್ಚಾತ್ಯರಿಗೆ ಈ ವಿಷಯವು ಪರೋಕ್ಷವಾಗಿದ್ದುದರಿಂದ ಡಾ॥ ಅಲೆಕ್ಸಿಸ್ ಕ್ಯಾರೆಲ್ಲರು ತುಂಬಾ ಶ್ರಮಿಸಿ, ತಿಳಿಯಲಾರದೆ ಪಶ್ಚಾತ್ತಾಪದಿಂದ 'ಮ್ಯಾನ್ ದಿ ಅನ್ನೋನ್' ಗ್ರಂಥದಲ್ಲಿ ವೈಫಲ್ಯವನ್ನು ವರ್ಣಿಸಿರುತ್ತಾನೆ. 84 ಲಕ್ಷ (?) ಜೀವರಾಶಿಗಳ ಶರೀರದಲ್ಲಿ ಚೈತನ್ಯ, ಅವಯವಗಳು, ಇಂದ್ರಿಯಗಳು, ರಕ್ತನಾಳ ಮತ್ತು ನಾಡಿಗಳು ಪ್ರತಿಕ್ಷಣದಲ್ಲಿಯೂ ನಡೆಸುವ ಅದ್ಭುತ ವ್ಯಾಪಾರಗಳನ್ನು ಕಾಳಿದಾಸ ಮಹಾಕವಿ ಮೊದಲಾದವರು ಕಾವ್ಯಗಳ ಮೂಲಕ ವಾಚಕರ ಗಮನಕ್ಕೆ ತಂದಿದ್ದರೆ ವಿಶ್ವರಾಜನೀತಿಯು ಸ್ವಯಂ ಪ್ರಕಾಶವಾಗಿ ಜನತೆಗೆ ಸಾಕ್ಷಾತ್ಕಾರವಾಗುತ್ತಿತ್ತು ಎಂದು ತೋರುತ್ತದೆ.

ಆಹಾರ ವಿಹಾರಗಳ ಹೆಚ್ಚು ಕಡಿಮೆಗಳಿಂದ ಆರೋಗ್ಯವು ವ್ಯತ್ಯಾಸವಾಗುವುದು; ಜುಗುಪ್ಸೆ, ಅಸ್ಪಷ್ಟತೆ, ರೋಗರುಜಿನಗಳು ತಲೆದೋರುವುವು; ಪುಷ್ಟವಾದ ಆಲೋಚನೆಗಳಲ್ಲಿ ಪ್ರವೃತ್ತಿಯುಂಟಾಗುವುದು; ಶಾಂತಿಗೆ ಭಂಗ ಬಂದು ಮಾನಸಿಕ, ಶಾರೀರಕ ದೌರ್ಬಲ್ಯಗಳು ಉಂಟಾಗುವುವು. ಈ ಬಗೆಯ ದೌರ್ಬಲ್ಯ, ಆನಾರೋಗ್ಯ, ಅಶಾಂತಿಯ ಪರಿಣಾಮವಾಗಿ ರಾಜನೀತಿಗೆ ವಿರೋಧವಾದ ನಡತೆಗಳು ಅನಿವಾರಣೀಯವಾಗಿಯೇ ಶಕ್ತಿವಿಹಾರ ನಡೆದು ಹೋಗುವುವು. ಇಂತಹ ಸಂದರ್ಭಗಳಲ್ಲಿ ಮಾನವಜೀವನಕ್ಕೆ ಅತ್ಯಾವಶ್ಯಕವಾಗಿ ಬೆಳಕನ್ನು ತೋರಿಸುವ ಭಾರತೀಯ (ರಾಷ್ಟ್ರೀಯ) ವೈದ್ಯಶಾಸ್ತ್ರ(ವಾ)ದಸ್ಸಂತೀ ಸೂಕ್ತಿ ಕೋಶ ಮೊದಲಾದ ಅನೇಕ ಗ್ರಂಥಗಳೂ, ಕಲೆಗಳೂ ಮಾನವನನ್ನು ಸುತ್ತಿಕೊಂಡು ಸೇವೆಗೆ ಸದಾ ಸಿದ್ಧವಾಗಿರುವುವು. ಇವುಗಳನ್ನು ವಿವೇಕದಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸರಿಸಿ ವಿಷಯಗಳನ್ನು ಸಮತೆಯಿಂದ ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಮಾಡುವುದೇ, ರಾಜನೀತಿಯು ಮಾನವೀಯತೆಗೆ ಸಲ್ಲಿಸುವ ಗೌರವವಾಗಿದು ತ್ತದೆ. ಈ ಭಾಗದಲ್ಲಿ ಭಾರತೀಯ ವೈದ್ಯವು ತನ್ನ ಮಿತಿಯಲ್ಲಿದ್ದುಕೊಂಡು ಸಹಜನಂತೆ ಸಹಜವಾದ ಅಂಗರಕ್ಷಕವಾಗಿದ್ದು ಆಶ್ರಿತರಿಗೆ ಬಾಧೆಯು ಬರದಂತೆ ಎಚ್ಚರವಾಗಿರುವುದಕ್ಕೂ ಬಂದ ಬಾಧೆಯನ್ನು ಕಾಲ, ದೇಶ, ಪಾತ್ರಗಳ ಮಿತಿ ಯಲ್ಲಿ ಹೋಗಲಾಡಿಸುವುದಕ್ಕೂ ಸಹಾಯಕವಾಗುವುದು. ಹೀಗಿದ್ದರೂ ಉದಾಸೀನಭಾವದಿಂದ ಇರುವವರು ಆತ್ಮವಂಚಕರೇ ಆಗಿರುತ್ತಾರೆ. ಆಹಾರವೇ ಔಷಧವಾಗಿಯೂ ಔಷಧಗಳೇ ಆಹಾರವಾಗಿಯೂ ಇರುವ ನೀತಿಯನ್ನು ತಿಳಿಸಿ ಎಚ್ಚರಿಕೆ ಕೊಡುವ ಭಾರತ ಅಥವಾ ಬ್ರಾಹ್ಮಣ ವೈದ್ಯಶಾಸ್ತ್ರವು ಪರಮ ಆಪ್ತ ಮಿತ್ರನಂತಿರುವುದು.

ಸಂಯಮನ (ದಮನ) ವನ್ನು ಪ್ರೋತ್ಸಾಹಿಸುವ ಮತ್ತು ಸಾತ್ವಿಕಗುಣಾ ಶ್ರಯವಾದ ಆರೋಗ್ಯವುಳ್ಳ ಪ್ರಜೆಯೇ ಸಂಪನ್ನನು, ಧನಿಕನು, ಕೃಪ್ತನು, ಆಸ್ತಿಕನು ದೇವಭಕ್ತನು. ರಾಷ್ಟ್ರಪ್ರೇಮಿಯು, ರಾಷ್ಟ್ರರಕ್ಷಕನು, ರಾಷ್ಟ್ರಸೇವಕನು ಯೋಗಿಯು (ರಾಜಯೋಗಿಯು), ಹಂಸನು ಆಗಿರುತ್ತಾನೆ: "ವಿಷಮ ವ್ಯಾಪಾರಗಳಿಲ್ಲದೆ ಸಮಭಾವ ಸ್ಥಿತಿಯಲ್ಲಿರುವ ಶರೀರದಲ್ಲಿ ಮನಸ್ಸು ಸದಾ ಪ್ರಸನ್ನತೆಯಿಂದ ಇದ್ದು ಸಮಾಧಾನವಾಗಿರುವುದು" ಎಂಬ ನಾಣ್ನುಡಿಯಂತೆ ಶರೀರದ ಸ್ವಸ್ಥತೆಗಾಗಿ ರಾಜನೀತಿಯನ್ನು ಮನಸ್ಸಿನಲ್ಲಿ ಧರಿಸಿ ಅನುಷ್ಠಾನದಲ್ಲಿಟ್ಟುಕೊ ಳ್ಳುವ ಅರ್ಹತೆಯು ಆರೋಗ್ಯಭಾಗ್ಯಶಾಲಿಯಾದ ಪ್ರಜೆಗೆ ಮಿಡುಪಾಗಿದ್ದಂತೆ ಲಭಿಸುವುದು

೮

ಕಸ್ಯ ಸ್ವಿತ್ = ಪರಮಾತ್ಮನಿಂದ ಉಂಟಾದ (ಪರಮಾತ್ಮನಿಗೆ ಸೇರಿದು ದೆಂದು ವ್ಯವಹಾರಿಕವಾಗಿ ಹೇಳಬಹುದಾದ) ಧನಂ = ಇಂದ್ರಿಯ ಭೋಗ್ಯ ವಸ್ತು ಸಮಷ್ಟಿಯು (ಧನ ವಾ ಮಹಾಲಕ್ಷ್ಮೀ) ಜನಸಂಪತ್ತು ಮೊದಲಾದುವು ಗಳಿಂದ ಕೂಡಿದ ಜಗತ್ತೆಂಬ ಧನವನ್ನು ತ್ಯಕ್ತೇನ = ಬಿಡಲ್ಪಟ್ಟ ತೇನ = ("ಈಶಾವಾಸ್ಯಮಿದಂ ಸರ್ವಂ ಜಗತ್ತಿಲ್ಲವೂ ಪರಮಾತ್ಮನಿಂದ ಒಳಗೂ ಹೊರಗೂ

*

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವ್ಯಾಪೃತವು"ಎಂಬ ಜ್ಞಾನ) ಸೂಕ್ತರಾಜನೀತಿಯಿಂದ (ಅಂದರೆ ರಾಜನೀತಿಯಿಲ್ಲದೆ) ಮಾ ಭುಂಜೀಥಾಃ = ಅನುಭವಿಸಬಾರದು; ಮಾ ಗೃಧಃ = ಅದಕ್ಕಾಗಿ ಅತಿಯಾಸೆ (ಲೋಭ) ಪಡಲೂ ಬಾರದು ಎಂಬುದು ಹಿತವೂ ವೇದೋತ್ತವೂ ಆದ ರಾಜನೀತಿಯಾಗಿದೆ. ಸಂಯೋಜನ ವಿಭಜನವೆಂಬ ಸಂಪುಟೀಕರಣ ಪದ್ಧತಿಯಿಂದ ವೇದವನ್ನು ವಿಂಗಡಿಸಿ ಭಗವಾ ವೇದವ್ಯಾಸರು ಜೋಡಿಸಿರುವ ಉಪನಿಷತ್ತುಗಳಿಗೆಲ್ಲಾ ಪ್ರಥಮವಾದ ಈ ಉಪನಿಷತ್ತಿನ ಪ್ರಥಮ ವಾಕ್ಯದ ಸ್ಮರಣೆ ವಾ ಉಚ್ಚಾರಣೆಯಿಲ್ಲದೆ ಜಗತ್ ವಾ ಧನವನ್ನು ಅನುಭವಿಸಬಾರದು. ಎಂದರೆ ಇಂದ್ರಿಯಾನುಭವ ಕಾಲದಲ್ಲಿ ಆ ಸೂಕ್ತಿಯನ್ನು ಸ್ಮರಿಸಬೇಕು ಅಥವಾ ಉಚ್ಚರಿಸಬೇಕು. ಎಂದು ಪ್ರವೃತ್ತಿಪರವಾದ ಅರ್ಥ. ಮಹೀಸುರ ದೇಶದ ಸಂಗೀತ ವಿದ್ವಾಂಸರು ಸರಳವಾದ ರೀತಿಯಲ್ಲಿ ಮುಕ್ತಳು ಮೊದಲುಗೊಂಡು ಸರ್ವರೂ ಶ್ರವಣ, ಪಠನ, ಗಾನಗಳಿಂದ ಈ ರಾಜನೀತಿಯನ್ನು ಜೀವನ ವಾ ಅನುಷ್ಠಾನದಲ್ಲಿ ಅಳವಡಿಸಿಕೊಳ್ಳಬಹುದಾಗಿರುವಂತೆ ಅತಿ ಲಲಿತವಾದ ಪದ ಗಳನ್ನು ಜೋಡಿಸಿ ರಚಿಸಿರುತ್ತಾರೆ :

" ಕೆರೆಯ ನೀರನು ಕೆರೆಗೆ ಚಿಲ್ಲಿ ನರವ ಪಡೆದವರಂತೆ ಕಾಣಿರೊ
ಹರಿಯ ಕರುಣದೊಳಾದ ಭಾಗ್ಯವ ಹರಿ ಸಮರ್ಪಣೆ ಮಾಡಿ
ಬದುಕಿರೋ " ಎಂಬುದು ಸಂಗೀತದ ಸೊಟ್ಟವೊದಲನೆಯ ಪಾಠದ ಸಾಹಿತ್ಯ. ಇಷ್ಟು ಸುಲಭವಾಗಿ, ಸರಳವಾಗಿ, ಮನರಂಜಕವಾಗಿ ಹೃದಯಂಗಮವಾಗಿ, ಅನುಷ್ಠಾನಪರವಾಗಿ, ಬೇರೆ ಯಾವ ಸಾಹಿತ್ಯದಲ್ಲಿಯೂ ಕಾಣದಿರುವ ಈ ಗಾನಸಾಹಿತ್ಯ ಜ್ಯೋತಿಯು ಇಡೀ ರಾಷ್ಟ್ರ ಪ್ರಪಂಚಗಳನ್ನು ಮಾತ್ರವಲ್ಲದೆ ಸೌರವ್ಯೂಹದ ಜ್ಯೋತಿಗಳನ್ನೂ ಬೆಳಗಿಸುವಂತೆ ಮಾಡಿರುವ ಆ ವಿದ್ವಾಂಸರ ಪರಿಶ್ರಮವೂ ರಾಜನೀತಿ ಜ್ಞಾನವೂ ಸರ್ವಾದರ್ಶವಾಗಿರುತ್ತವೆ. ಭಗವಂತನ ಧನವನ್ನು ಭಗವಂತನಿಗೆ ಅರ್ಪಿಸಿ ಸ್ವತಃ ಸುಖಸಂತೋಷಗಳನ್ನು ಅನುಭವಿಸುವುದಕ್ಕೂ ಇತರರನ್ನೂ ಸಂತುಷ್ಟಿಗೊಳಿಸುವುದಕ್ಕೂ, ಅಹಂಕಾರಾದಿಗಳಿಂದ ಕೂಡಿದ ವ್ಯಕ್ತಿಯ ಸಾಮರ್ಥ್ಯಾದಿಗಳು ಕೇನೋಪನಿಷತ್ತಿನ ಕಥೆಯಂತೆ ತಿಳಿಯುವಂತೆ ನಿಷ್ಪ್ರಯೋಜಕವೆಂಬುದನ್ನು ತೋರಿಸುವುದಕ್ಕೂ ಉಪಯೋಗವಾದ ಭಾರತ ರಾಷ್ಟ್ರದ ಈ ರಾಜನೀತಿ ಸಾಹಿತ್ಯವು ವಿಶ್ವಸಾಹಿತ್ಯವೂ ಪೂಜ್ಯವೂ ವಿಶ್ವಾದರಣೀಯವೂ ಆಗಿರುತ್ತದೆ. ಈ ಗಾನವು ಆಂಧ್ರ, ತಮಿಳು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕನ್ನಡ ಭಾಷೆಗಳನ್ನಾಡುವ ಜನಗಳು ವಾಸಿಸುವ ಭಾರತದ ಪ್ರದೇಶಗಳಲ್ಲೆಲ್ಲಾ ಏಕ ಪ್ರಕಾರವಾಗಿ ಅಭ್ಯಾಸ ಮಾಡಲ್ಪಡುತ್ತಿದೆ.

ಸನ್ನಿವೇಶ ಪ್ರಾಬಲ್ಯ ಇಂದ್ರಿಯ ದೌರ್ಬಲ್ಯಾದಿಗಳಿಂದ ಮನಸ್ಸು ಧೈರ್ಯವನ್ನು ಕಳೆದುಕೊಂಡು ಮೋಹದ ಬಲೆಯಲ್ಲಿ ಬೀಳುವುದು. ಮೋಹವೆಂಬ ಸಮ್ಮೋಹನಾಸ್ತ್ರಕ್ಕೆ ಬಲಿಯಾಗದವನು ರಾಜನೀತಿಜ್ಞನು. ವೇಷ, ನಟನೆ, ಮೋಸ, ಕುಹಕಗಳಿಗೆ ಮನಸೋತು ದುರ್ಜನರು, ಪರಕೀಯರು ವಂಚಕರು ಮೊದಲಾದವರ ಸ್ವಭಾವವನ್ನು ತಿಳಿಯದೆ ಅಥವಾ ತಿಳಿಯಲಾಗದ ಕಷ್ಟ ನಷ್ಟಗಳನ್ನು ಅನುಭವಿಸುವುದಕ್ಕೆ ವ್ಯಕ್ತಿಯ 'ಮೋಹ'ವೇ ಕಾರಣ. ಕಪಟ ಸ್ವಭಾವದ ವೇಷಭೂಷಣಗಳೂ, ನುಡಿದ ಮಧುರ ವಚನಗಳೂ ಇಂದ್ರಿಯಗಳ ಬಳಿ ಸುಳಿದಾಗ 'ವೃಷ್ಟ್ಯಾವೃತಾಗಾ ಮೋಹಾವೇಶಂ' ಎಂದು ಅಪೇಕ್ಷಜ್ಞಾನಿಗಳು ಹೇಳಿದ ರಾಜನೀತಿಯಂತೆ ಮೋಹಗೊಳ್ಳಬಾರದು ಮತ್ತು ದುಡುಕಬಾರದು. ಧೈರ್ಯ ಸಹನೆಗಳಿಂದ ದೀರ್ಘಕಾಲ ಕಾರ್ಯಾಕಾರ್ಯ ವಿಷಯವನ್ನು ಪರ್ಯಾಲೋಚಿಸಿ ನಿರ್ಣಯಿಸಬೇಕು. ಇದನ್ನೇ 'ಮನಸಿ ವಿಚಿಂತಯ ವಾರಂ ವಾರಂ' ಎಂದು ಪೂಜ್ಯರು ದಾರಿ ತೋರಿಸಿರುತ್ತಾರೆ. ಸಾರ್ವಜನಿಕ ಕೆಲಸದಲ್ಲಿರುವವರು, ರಾಜಕರು, ವ್ಯಾಪಾರಿಗಳು ಮೊದಲಾಗಿ ಸರ್ವರೂ ಸ್ವಾರ್ಥಕ್ಕಾಗಿ ಮೋಹದ ಬಲೆಯನ್ನು ಬೀಸುತ್ತಾರೆ. ರೋಗದಲ್ಲಿ ನರಳುವ ಭಾರತೀಯ ರೋಗಿಗೆ ಚಿಕಿತ್ಸೆ ಮಾಡುವ ವಿದೇಶೀ ವೈದ್ಯರ ಮೋಹದ ಬಲೆಯು ಅಸಮ್ಮತವಾದುದು. ಕಾರಣ. ಕೇಳಿದ ರೋಗಿಗಳ ಕಷ್ಟನಿವಾರಣೆಗೆಂದು ಹೊರಟ ಪ್ರಕಟನ ಚತುರತೆಗೆ ಮರುಳಾದ ಭಾರತ ಮಾತೃ ಭೂಮಿಯ ರೋಗಿಗಳ ಕಷ್ಟವು ಹೆಚ್ಚಿ ಅರ್ಥಹಾನಿ ಪ್ರಾಣಹಾನಿಗಳಾಗುವವು. ಮೋಹದಿಂದ ವಿದೇಶೀ ಚಿಕಿತ್ಸೆಯನ್ನು ಸ್ವಾಗತಿಸಿದ ಮನೋಭಾವದ ಮಹಿಮೆಯಿಂದ ಬಾಧೆಯು ನಿವಾರಣೆಯಾದಂತೆ ಕಂಡರೂ ರೋಗವು ಗುಪ್ತವಾಗಿಯೇ ನಿಲ್ಲುವುದೆಂದು ಸರ್ವರೂ ತಿಳಿದಿರುತ್ತಾರೆ. ಇಂತಹ ಪ್ರಸಂಗಗಳಲ್ಲಿ ಸ್ತ್ರೀತ್ವವು ಮಿಗಿಲಾದ ನಷ್ಟಕ್ಕೆ ಗುರಿಯಾಗಿ ನರಳಬೇಕಾಗಿದೆ. ಆದರೆ ಸ್ತ್ರೀಯರು ಗೃಹ ರಾಜ್ಯದ ಸಮ್ರಾಜ್ಞಿಗಳು; ರಾಜನೀತಿಯಲ್ಲಿ ಮೇಧಾವಿಗಳೆಂಬುದು ನಿಜ. ಭಾರವಿಯು ಕಿರಾತಾರ್ಜುನೀಯದಲ್ಲಿ ದ್ರೌಪದೀ ಮುಖದಿಂದ ಆಕೆಯ ಭರ್ತೃವರ್ಗಕ್ಕೆ ರಾಜನೀತಿಯನ್ನು ಉಪದೇಶಿಸಿ ಹುರಿದುಂಬಿಸುವ ಸನ್ನಿವೇಶವನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಸ್ತಾರವಾಗಿ ಸಹಜರೀತಿಯಲ್ಲಿ ವರ್ಣಿಸಿರುತ್ತಾನೆ. ರಾಜನೀತಿ ಜ್ಞಾನದಿಂದ ಮೋಹವನ್ನು ಗೆದ್ದು ವಿವೇಚನೆಯನ್ನೂ ಪ್ರಯೋಗಿಸುವ ಸ್ತ್ರೀ ಸಮ್ರಾಜ್ಞಿಗಳೇ ಪ್ರಪಂಚದಲ್ಲಿ ಸರ್ವದಾ ಸರ್ವರನ್ನೂ ರಕ್ಷಿಸುವವರು: ಉಚ್ಛೃಂಖಲರಂತೆ ಸ್ವಾತಂತ್ರ್ಯವನ್ನು ಪ್ರಯೋಗಿಸದೆ, ಸ್ವಾತಂತ್ರ್ಯಕ್ಕೆ ಬಲಿಯಾಗದೆ ವಿವಿಧ ಸನ್ನಿವೇಶಗಳಲ್ಲಿ ಅಸ್ವಾತಂತ್ರ್ಯವೆಂಬ ಸೋಗಿನ ರಾಜನೀತಿ ದಂಡವನ್ನು ಧರಿಸಿ, ಕುಟುಂಬಾದಿ ರಾಜ್ಯಾವಲಯಗಳನ್ನು ಮಿತಿಯಲ್ಲಿಟ್ಟುಕೊಂಡಿರುವ ಭಾಗ್ಯವು ಭಾರತೇಯ ಸ್ತ್ರೀ ಸಮ್ರಾಜ್ಞಿಗಳಿಗೆ ಮಾತ್ರ ಮುಡುಪಾಗಿರುತ್ತದೆ.

ಭಗವತ್ಪೂಜ್ಯಪಾದರು ಹೇಳಿರುವ 'ಪುತ್ರಾದಪಿ ಧನಭಾಜಾಂ ಭೀತಿಃ ಸರ್ವತ್ರೈಷಾ ವಿಹಿತಾ ರೀತಿಃ' ಎಂಬ ರಾಜನೀತಿ ಸೂಕ್ತಿಯು ಜೀವನದಲ್ಲಿ ಸಾರ್ವತ್ರಿಕವಾಗಿ ಸ್ವಾಭಾವಿಕವಾಗಿರುವ ಆರ್ಥಿಕ ಪರಿಣಾಮ ಸ್ಥಿತಿಯನ್ನೂ ತಿಳಿಸಿ ಎಚ್ಚರಿಸುತ್ತದೆ. ಮೋಹ ಕಾರ್ಪಣ್ಯಗಳಿಗೆ ಒಳಗಾಗಬಹುದಾದ ಪ್ರಜೆಗಳೆಲ್ಲರ ಮೇಲಿನ ಕನಿಕರದಿಂದ ಆಪ್ತಮಿತ್ರ ವಾಕ್ಯದ ಮಿತಿಯಲ್ಲಿ ಹೇಳಿದ, ತ್ರಿಕಾಲಾಬಾಧಿತವಾದ ಸತ್ಯಾಂಶವುಳ್ಳ ರಾಜನೀತಿಯನ್ನು ಜಾಗರೂಕತೆಯಿಂದ ಪಾಲಿಸುವವರ ನಿತ್ಯಾನಂದಾನುಭವಕ್ಕೆ ಭಂಗವೆಂದಿಗೂ ಬರುವುದಿಲ್ಲ. ಪುತ್ರರಿಂದಲೂ ಧನಿಕರಿಗೆ ಭೀತಿಯುಂಟಾದ್ದರಿಂದಲೇ ನ್ಯಾಯ ರಾಜನೀತಿಗಳಿಗನುಗುಣವಾಗಿ ಪುತ್ರಿಯರ ಗೌರವ ಸ್ಥಾನಮಾನಗಳಿಗೆ ಕುಂದಕ ಬರದಂತೆ ಋತ, ಕ್ಷತ್ರ, ಸಂಸ್ಕೃತಿಗಳಿಗನುಗುಣವಾಗಿ ನಿಷ್ಪಕ್ಷಪಾತವಾಗಿ ಶಾಸನಸಂಹಿತೆಗಳು ರಚಿತವಾಗಿರುವುವು. ಇದು ಭಾರತದ ಭಾಗ್ಯ. ಇದನ್ನೇ ವಿಶ್ವಕ್ಕೆಲ್ಲಾ ಹರಡಿ ಶಾಂತಿಯನ್ನುಂಟುಮಾಡುವುದು ಭಾರತ ವೀರರ ಕರ್ತವ್ಯ. ಆದರೆ ರಾಜನೀತಿ ವಿಮುಖರಾದಂತೆ ಪುತ್ರಿಯರಿಗೆ ಮತ್ತು ಅಳಿಯಂದಿರಿಗೆ ದಾಯಭಾಗ ಪ್ರದಾನವು ಋತ ಕ್ಷತ್ರಗಳಿಗೆ ವಿರುದ್ಧವಾಗಿರುವುದನ್ನು ತಿಳಿಯದೆ ಶಾಸನವನ್ನು ಬದಲಾಯಿಸುವುದರಿಂದ ತಲೆಕೆಳಕಾಗಿ ಪ್ರಕೃತಿಯ ಉಗ್ರಕೋಪಕ್ಕೆ ಸ್ವತಃ ರಾಷ್ಟ್ರವನ್ನು ಒಡ್ಡಿದಂತಾಗುವುದು. ಇದು ಅಸೂಯೆಯಿಂದ ರಾಷ್ಟ್ರದಲ್ಲಿ ಒಡಕುಂಟಾಗಲು ರಾಜನೀತಿ ಜ್ಞಾನವಿಲ್ಲದ ಪರಕೀಯರು ರಾಜನೀತಿ ಜ್ಞಾನವಿಲ್ಲದ ಪರ ಮೇಲೆ ಹೊರಿಸಿದ ಫಲವಾಗಿದೆ. ಹೀಗೆ ಕತ್ತಲೆಯಲ್ಲಿ ಕಷ್ಟನಷ್ಟಗಳಿಂದ ತಡಕಾಡುವವರಿಗೆ ರಾಜನೀತಿ ಸೂರ್ಯೋದಯವೇ ಗತಿಯನ್ನು ತೋರಿಸಬೇಕಾಗಿರುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚಾಣಕ್ಯ ಮಹರ್ಷಿಗಳು ದೇಶದ ಸೈನ್ಯದಿಗೆ ಭಂಗ ತರುವ ಧನ ಸಂಗ್ರಹದಿಂದ ಉಂಟಾಗುವ ಅಹಂಕಾರ, ಮೋಹ ಮೊದಲಾದುವುಗಳನ್ನು ಅಡಗಿಸಲು ಅಥವಾ ಹತೋಟಿಯಲ್ಲಿಡಲು ಜನರ ಧನವು ನಾನಾ ವಿಧದಲ್ಲಿ ವಿನಿಯೋಗವಾಗುವಂತೆ ಪ್ರದೇಶ ರಾಜ್ಯವಲಯದ ಅಡಚಣೆವು ಯತ್ನಿಸಬಹುದಾದ ಭೇದ, ದಂಡಾದಿ ಉಪಾಯಗಳ ಹೊಂದಾಣಿಕೆಯನ್ನು ಅಸಹ್ಯವಾಗಿ ಕಂಡುಬಂದರೂ, ಸ್ಪಷ್ಟವಾಗಿ ಹೇಳಿರುತ್ತಾರೆ ಈ ವಾಕ್ಯಗಳಲ್ಲಿ ತೋರಿಬರುವ 'ಧ್ವನಿ' ಯನ್ನು ಆಡಳಿತದವರೂ ಪ್ರಜೆಗಳೂ ಗಮನಿಸಿ ಎಚ್ಚೆತ್ತುಕೊಂಡು ಅಂತಹ ಸನ್ನಿವೇಶಕ್ಕೆ ಎಡೆಯಿಡದಂತೆ ರಾಜನೀತಿ ತತ್ಪಾನುಸಂಧಾನರಾಗಬೇಕೆಂಬುದೇ ಚಾಣಕ್ಯ ಮಹರ್ಷಿಗಳ ಇಂಗಿತ; ಪ್ರವೃತ್ತಿ ಪರವಾಗಿ ಸಾಧಿಸಬೇಕೆಂಬ ಉದ್ದೇಶವೇ ಪ್ರಧಾನವಾಗುವುದಾಗಿರಕೂಡದು – ಎಂಬುದನ್ನು ಚಾಣಕ್ಯ ಮಹರ್ಷಿಗಳ ಸೂಕ್ತಿಗಳು ತಿಳಿಸುತ್ತವೆ. ಆವರ ಗ್ರಂಥದಲ್ಲಿ ಕಂಡ ಪ್ರಯೋಗಗಳ ತಾತ್ಪರ್ಯವನ್ನೂ ಇಂಗಿತವನ್ನೂ ತಿಳಿಯಬೇ. ಬಾಲಕರು ಶಾಲೆಯಲ್ಲಿ ನಡೆಸುವ ವಿಜ್ಞಾನ ಪರೀಕ್ಷೆಗಳಿಗೆ ಸಂಬಂಧಿಸಿದ ಸೂಚನೆಗಳಂತೆ ನಡೆಯುವುದಾದರೆ ವ್ಯಕ್ತಿಗೂ ರಾಷ್ಟ್ರವೂ ವಿನಾಶವನ್ನು ಹೊಂದುವುವು. ಹೀಗೆಯೇ ಮನುಧರ್ಮಶಾಸ್ತ್ರಾದಿ ಗ್ರಂಥಗಳಲ್ಲಿ ಕಂಡ ವಾಕ್ಯಗಳನ್ನು ಶಾಂತಿ ವರ್ಧಕಗಳಾಗುವಂತೆ ಸರ್ವರೂ ಗ್ರಹಿಸಬೇಕು. ಈ ರಹಸ್ಯವನ್ನು ತಿಳಿಯದ ವಿದೇಶೀಯರು ಅವರ ಭಾಷೆಯಲ್ಲಿ ಪರಿವರ್ತಿಸಿರುವ ಭಾರತೀಯ ಧರ್ಮ ಗ್ರಂಥಗಳು ತಮಗೂ ಆ ಗ್ರಂಥಗಳ ಜನ್ಮ ಭೂಮಿಗೂ ಘೋರವಾದ ಪ್ರಳಯವನ್ನೂ ಪ್ರಕೃತಿ ಕೋಪಗಳನ್ನು ಉಂಟು ಮಾಡುವುವು. ಆದುದರಿಂದಲೇ ಸಮತೆಯನ್ನು ಗ್ರಹಿಸುವ ದೃಷ್ಟಿಯಿಂದ ಚಾಣಕ್ಯರ ಗ್ರಂಥವನ್ನು ಪಠಿಸಬೇಕೇ ಹೊರತು ಭಟ್ಟರ ಹೊಟ್ಟೆಗೆ ಹೆಂಟೀಗೊಬ್ಬ ಹೊಕ್ಕಿತು ಎತ್ರ ಉಯಿತು ಎಂದರೆ ಕೊಟ್ಟಿಗೆಯಲ್ಲಿ ಕಟ್ಟು ಎಂಬ ವಾಕ್ಯಗಳ ಶಬ್ದಾರ್ಥಗಳನ್ನು ಗ್ರಹಿಸಿ ಮಂಕುತನವನ್ನು ಬೆಳಗುವವರಂತೆ ಮಹರ್ಷಿಗಳ ಗ್ರಂಥಕ್ಕೆ ಕಳಂಕ ತರಬಾರದು. ಯೋಗವಾಸಿಷ್ಠ, ಭಗವದ್ಗೀತಾದಿಗಳೂ ಸಹ ವಿಮರ್ಶಾಗ್ರಂಥಗಳಾಗಿ ನಿದರ್ಶನಗಳಿಂದ ಉಪದೇಶಿಸುವ ರಾಜನೀತಿಯನ್ನು ಪುರಸ್ಕರಿಸಬೇಕು. ಆಚರಣೆಯು ಮಾತ್ರ 'ಯಥೇಚ್ಛಸಿ ತಥಾ ಕುರು', ಎಂಬಂತೆ ಕ್ಷೇತ್ರಜ್ಞನ ಸಂಕಲ್ಪೇಚ್ಛಾ ಪ್ರವೃತ್ತಿಗೆ ಸೇರಿದುದಾಗಿರುವುದು. ಇಂತಹ ಗ್ರಂಥಗಳು ರಾಜನೀತಿಗೆ ಪೋಷಕವಾಗಿರುವುವು. ರಾಜನೀತಿಯು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈ ಗ್ರಂಥಗಳಿಗೆ ಮೆರುಗು ಕೊಡುವುದು.

ಅದ್ಯೈತಾನ್ಯೃತ ವರ್ಷಿಣೀ, ಭವ ದ್ವೇಷಿಣೀ ಎಂದು ಭಗವದ್ಗೀತೆಗೆ ಅನ್ವಯಿಸುವ ವಿಶೇಷಣಗಳು, ಅಪಾತತಃ ಗೀತೆಯು ಸಂಕುಚಿತ ಭಾವವುಳ್ಳ ದ್ದಿಂತಲೂ ಸಾರ್ವಜನಿಕ ಸಾರ್ವತ್ರಿಕವಲ್ಲವೆಂತಲೂ ಹೇಳುವ ಸಂಭವವುಂಟಾಗುತ್ತದೆ. ಇಂತಹ ಪ್ರಸಂಗಕ್ಕೆ ಅವಕಾಶಕೊಡುವುದು ರಾಜನೀತಿಯಲ್ಲ ; ಸದ್ಯೋಗಾನ್ಯೃತ ವರ್ಷಿಣೀ, ಸನು ದರ್ಶಿನೀ ಎಂಬ ವಿಶೇಷಣಗಳು ಗೀತೆಯ ಸ್ವರೂಪವನ್ನು ಸ್ಪಷ್ಟಪಡಿಸುತ್ತವೆ.[1] ಎಂಬುವನ್ನು ವಿವೇಕದಿಂದ ಹೊಂದಿಸಿಕೊಳ್ಳುವುದೇ ರಾಜನೀತಿಯಾಗಿರುತ್ತದೆ. ಹೀಗೆಯೇ ನಹಿ ನಹಿ ರಕ್ಷತಿ ಡುಕೃಞ್ ಕರಣೇ ಎಂಬುವರೆ ರಾಜನೀತಿ ರಹಸ್ಯವನ್ನು ತಿಳಿಯಬೇಕು ಡುಕೃಞ್ ಕರಣೇ ಎಂಬ ಪವಿತ್ರವಾವ ವಾಕ್ಯಾಸ್ತ್ರವನ್ನು ತೆಗಳುವ ಉದ್ದೇಶದಿಂದ ಈ ಮಹೋಪದೇಶವು ಪೂಜ್ಯಪಾದರ ಬಾಯಿಂದ ಬರಲಿಲ್ಲ. ತನ್ನ ಯೋಗ್ಯತೆಗೆ, ವಯಸ್ಸಿಗೆ, ಸನ್ನಿವೇಶಕ್ಕೆ ಮೀರಿದ ಅಥವಾ ಸ್ವಪರಹಿತಸಾಧನೆಯಾಗದಿರಬಹುದಾದ ವಿಷಯಗಳಿಗೆ ವೃಥಾ ಶ್ರಮಿಸಿ ತನಗೆ ಹೊಂದಿಕೊಂಡು ಅಭ್ಯಸ್ತವಾಗಿ ಬಂದಿರುವ ಸೇವೆಯನ್ನು ಮುಂದುವರಿಸಬೇಕು ಎಂಬುದೇ ಅವರ ಗುಟ್ಟು. ಸ್ವಭಾವಿಕವಾಗಿ ಗೃಹಕೃತ್ಯ ನಿರ್ವಾಹದ ಕಲೆಗೆ, ಸಂಗೀತಕಲಾ ನೈಪುಣ್ಯವು ಅನಕಾಶವಿಲ್ಲವಾದುದರಿಂದಲೂ, ಗೃಹಸ್ಥಾಶ್ರಮಕ್ಕೆ ಬಾಧಕವಾಗುವುದರಿಂದಲೂ ಸಂಗೀತವನ್ನು ಮೋಹದಿಂದ ಕಲಿಯುವುದು ಸಾಧುವಲ್ಲ; ಆದುದರಿಂದ ನಹಿ ನಹಿ ರಕ್ಷತಿ ಸರಿಗಮಪದನಿಸ ಎಂಬ ಉಪದೇಶವನ್ನೂ ಅನ್ವಯಿಸಿಕೊಳ್ಳಬಹುದು.[2] ಶಬ್ದಕೋಶವನ್ನು ಕಂಠಸ್ಥಮಾಡುವ ಯತ್ನವು ಪ್ರತಿಭಾಶಕ್ತಿಯನ್ನು ಕುಗ್ಗಿಸುವುದು. ಆ ಕೋಶವನ್ನು ಕಂಠಪಾಠ ಮಾಡುವುದರಲ್ಲಿ ಔಚಿತ್ಯವಿರುವುದಿಲ್ಲ. ಇಂತಹ ಸನ್ನಿವೇಶದಲ್ಲಿ ಭಾರತೀಯ ಉಪಾಧ್ಯಾಯರೂ

1 ಈ ಸೂಕ್ತಿಯನ್ನು ಪ್ರಜಾಸಾಮ್ರಾಜ್ಯಂ – (ಸಂಶೋಧನವಿಭಾಗ) ಕಾರ್ಯಾಲಯದಿಂದ ಕೇರಳದ ಜ್ಞಾನಾಶ್ರಮದ ಶ್ರೀ ಪೂರ್ಣಾನಂದ ಸ್ವಾಮಿಗಳು ಪತ್ರಮುಖೇನ ತಿಳಿದು ತಮ್ಮ ಉಪನ್ಯಾಸಾವಸರದಲ್ಲಿ ಉದಾಹರಿಸಿರುವುದನ್ನು ಮೈಸೂರು ನಗರದ ಶ್ರೋತೃಗಳು ಸ್ಮರಿಸಿಕೊಳ್ಳಬಹುದು.

2 ಯೂನಿವರ್ಸಲ್ ರಿಲಿಜನ್ ಪುಟ 194

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿದ್ಯಾರ್ಥಿಗಳೂ "ನ ಹಿ ನ ಹಿ ರಕ್ಷತಿ ಡುಕೃಞ್ ಕರಣೇ" ಎಂಬ ರಾಜನೀತಿ ಸೂಕ್ತಿಯನ್ನು ಕಾರ್ಯರೂಪಕ್ಕೆ ತರುವುದರಿಂದ ಇಹ ಪರ ಸಾಧನೆಯಾಗುವುದು. ಇದರಂತೆ ಸರ್ಕಾರದ ಪಠ್ಯಪುಸ್ತಕ ಸಮಿತಿಯವರೂ ವಿಮರ್ಶೆ ಮಾಡಿ ಈ ವಿಚಾರವಲ್ಲಿ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಂಡರೆ ಲೋಪದೋಷಗಳು ನಿವಾರಣೆಯಾಗಿ ಶಾಲಾ ಶಿಕ್ಷಣ ಕಾರ್ಯವು ಸುಸಾಧ್ಯವಾಗುವುದು.

ರಾಜನೀತಿ ಸೂರ್ಯನು ಹೃದಯವನ್ನು ಬೆಳಗದೆ ಕಗ್ಗತ್ತಲೆಯಲ್ಲಿ ತಡವರಿಸುವ ವರೆಗೂ ರಾಷ್ಟ್ರಭಾವನೆಯು ಉದಯವಾಗುವುದಿಲ್ಲ. ರಾಷ್ಟ್ರೈಕ್ಯಭಾವ, ರಾಷ್ಟ್ರಗೀತೆ, ರಾಷ್ಟ್ರದೇವತೆ ಮೊದಲಾದ ವಿಷಯಗಳು ಜನತೆಯ ಹೃದಯಾಂತರಾಳವಲ್ಲಿ ಹುದುಗಿ ಹೋಗಿರುವುದರಿಂದ ಹೊರ ಹೊಮ್ಮಿ ಬರುವುದಕ್ಕೂ ಅನುಷ್ಠಾನವಲ್ಲಿಟ್ಟುಕೊಳ್ಳುವುದಕ್ಕೂ ಅವಕಾಶವೇ ಕಲ್ಪಿತವಾಗಿಲ್ಲ. ರಾಷ್ಟ್ರೈಕ್ಯ ಭಾವವು ಶಬ್ದದ ಮಿತಿಯಲ್ಲಿದ್ದು ನಾಲಿಗೆಯು ನುಡಿಯುವುದಾಗಿಯೂ, ಲೇಖನಿಯು ಬರೆಯುವುದಾಗಿಯೂ ಇರುತ್ತದೆ. ರಾಷ್ಟ್ರ ದೇವತೆಯ ಅನುಗ್ರಹಕ್ಕೆ ಪಾತ್ರರಾಗಬೇಕು; ರಾಷ್ಟ್ರ ಭಾವಾನುಸಂಧಾನ ಮಾಡಬೇಕು ಈ ಬಗೆಯ ಯೋಚನೆಯೇ ಸ್ವಾರ್ಥಪ್ರಧಾನ ವ್ಯಕ್ತಿಗಳಿಗೆ ಉಂಟಾಗುವಹಾಗಿಲ್ಲ. ರಾಷ್ಟ್ರ ದೇವತೆಯ ಪ್ರಾರ್ಥನೆಯು ಹೇಗೆ ? ಯಾವ ಮಟ್ಟದಲ್ಲಿರಬೇಕೆಂಬುದನ್ನಾಗಲೀ, ರಾಷ್ಟ್ರಗೀತೆಯ ಸಾಹಿತ್ಯವೇನೆಂಬುದನ್ನಾಗಲೀ ವಿದೇಶೀ ಭಾಷೆಯ ಭಕ್ತರು ಯೋಚಿಸಲಾರರು. ಉತ್ತಮ ಧ್ಯೇಯ ಸೂಚಕವಾದ ಸಾಹಿತ್ಯವನ್ನೊಳಗೊಂಡ ಗೀತೆಯು ಕ್ಷಿಪ್ರವಾಗಿ ಇಷ್ಟಾರ್ಥವನ್ನು ಕೊಡುವುದು. ರಾಷ್ಟ್ರಗೀತೆಯು ರಾಷ್ಟ್ರದ ಅಖಂಡ ಭಾವನೆಗೆ ಚ್ಯುತಿಯನ್ನುಂಟುಮಾಡದಿರಬಹುದಾದ ಸಂದರ್ಭಗಳನ್ನು ಕುರಿತು ದೀರ್ಘವಾದ ಲೇಖನವನ್ನು ಪ್ರಕಟಿಸಲಾಗಿತ್ತು.[1] ಈಚೆಗೆ ಪ್ರಜಾಸಾಮ್ರಾಜ್ಯಂ ಸಂಸ್ಥೆಯಲ್ಲಿ ವಿಪುಲವಾದ ವಿಮರ್ಶೆಗಳಿಂದ ಸುವ್ಯವಸ್ಥಿತವಾಗಿರಬೇಕಾದ ಅವಶ್ಯಕತೆ, ರಾಜನೀತಿಯ ಋಜುವಾರ್ಗವನ್ನು ಅನುಸರಿಸುವ ವಿಧಾನ ಮತ್ತು ಸಂವಿಧಾನಗಳ ವಿಷಯದಲ್ಲಿ ನಡೆಸಿದ ಸಂಶೋಧನದ ಫಲವು ಅಡಳಿತ ಮಾಡುವ ಅನೇಕ ಪ್ರಜೆಗಳ ಗಮನಕ್ಕೆ ಬಂದಿರುವುದು. ರಾಷ್ಟ್ರಗೀತೆ

1 ಕಾಶ್ಮೀರ ಮತ್ತು ವಿಶ್ವಶಾಂತಿ ದಿನಾಂಕ— 1949 ; 1950 ಮತ್ತು 1965

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯು ಪವಿತ್ರವಾಗಿ ಪೂರ್ಣತೆಯನ್ನು ಬೆಳಗುವ ವರೆಗೂ ರಾಷ್ಟ್ರದೇವತೆಯು ಪ್ರಸನ್ನಳಾಗಲು ಅವಕಾಶವಿಲ್ಲವಾಗಿ ರಾಷ್ಟ್ರೈಕ್ಯಸಾಧನೆ ಸಫಲವಾಗದಿರುವುದು.

ಮೋಹ, ದುರಂತ ಪ್ರಕರಣಗಳ ಪ್ರಭಾವದಿಂದ ಅಖಂಡ ಭಾರತದ ಯಥಾರ್ಥಜ್ಞಾನಕ್ಕೆ ಅಡಚಣೆಯಾಗಿರುವುದು. ಪರಕೀಯರೂ ರಾಜನೀತಿ ವಿಷಯವಲ್ಲಿ ದಾರಿ ತಪ್ಪಿ ಹೋಗಿ ಅಸೂಯೆಯಿಂದಲೋ ಎಂಬಂತೆ ಭಾರತಕ್ಕೆ ವಿಪತ್ರರೆಂದು ಹೇಳುತ್ತಾ ವಿರೋಧಿಗಳಾಗಿ ವರ್ತಿಸುವುದು, ವರ್ತಿಸುವಂತೆ ತೋರಿಸುವುದು ಶೋಚನೀಯವಾದುದು. ಪ್ರಬುದ್ಧರಾದ ಭಾರತವೀರರು ಈ ವಿಷಯವಲ್ಲಿ ಗಮನಕೊಡಬೇಕಾಗಿದೆ ಎಂಬುದು ಭಾವಿ ರಾಷ್ಟ್ರಭಾಗ್ಯದೇವತೆಯ ಪ್ರಾರ್ಥನೆಯಾಗಿದೆ.

೯

ಜ್ಯೋತಿರ್ಮಯನ ಜ್ಯೋತಿಃ ಪ್ರಪಂಚದಲ್ಲಿ ಇಂದ್ರಿಯ ಗೋಚರವಾಗಿರುವ ಸೌರವ್ಯೂಹದ ಸ್ಥಿತಿಗತಿಗಳು ಪರಮಪುರುಷನ ನೀತಿಗೆ, ರಾಜನೀತಿಗೆ (ಋತ-ಕ್ಷತ್ರ-ಕ್ಕೆ) ಒಳಪಟ್ಟಿರುತ್ತವೆ. ಇಚ್ಛಾಸಂಕಲ್ಪಾನುಸಾರ ನಡೆಯುವ ಕಾರ್ಯ ಮತ್ತು ಫಲಾನುಭವಗಳಿಗೆ ತಕ್ಕ ಶರೀರಗಳನ್ನು ಧರಿಸುವ ಕ್ಷೇತ್ರಜ್ಞರು (ದೇಹಿಗಳು, ಜೀವಿಗಳು) ಜನ್ಮಾರಭ್ಯ ವಿರಾಜಮಾನವಾಗಿ ದೇಹಾವಸಾನದ ವರೆಗೂ ನಡೆಸುವ ಸಂಕಲ್ಪ, ವ್ಯಾಪಾರ ಫಲಾನುಭವಗಳಿಗೆ ತಕ್ಕಂತೆ 'ಜೀವನನೀತಿ'ಯನ್ನು ವಿರಾಟ್ ಪುರುಷನ ವಿಶ್ವರಾಜನೀತಿಯ ಆದರ್ಶ ಕ್ರಮದಲ್ಲಿ ಅನುಸರಿಸಬೇಕಾದ ವಿಷಯವು, ಸಾಧುವೂ ಪ್ರಶಸ್ತವೂ ಆಗಿರುತ್ತದೆ.

ಭಾರತ ಭೂಮಾತೆಯ ಮಕ್ಕಳಾದ ಸ್ತ್ರೀ ಪುರುಷರ ಶ್ರೇಯಸ್ಸನ್ನು ರೂಪಿಸುವ ರಾಜನೀತಿ ಸೂಕ್ತಿಯನ್ನು ಶ್ರೀ ಭಗವತ್ಪೂಜ್ಯಪಾದರು ಜ್ಞಾಪಿಸಿ ಎಚ್ಚರಿಸಿ ಅನುಗ್ರಹಿಸಿರುತ್ತಾರೆ. "ಮಲ್ಲಭಸೇ ನಿಜ ಕರ್ಮೋಪಾತ್ತಂ ವಿತ್ತಂ ತೇನ ವಿನೋದಯ ಚಿತ್ತಂ" ಎಂಬ ದಿವ್ಯ ವಾಣಿಯು ಪ್ರತಿ ಭಾರತೀಯನ ಭೂತ ವರ್ತಮಾನ ಭವಿಷ್ಯತ್ತಿನ ವರ್ತನೆಗಳನ್ನು ಸ್ಪಷ್ಟವಾಗಿ ವರ್ಣಿಸಿರುತ್ತದೆ. ಪ್ರತಿಯೊಂದು ಪದವೂ ಜೀವನದ ಅನೇಕ ಅಂಶಗಳಿಗೆ ಸಂಬಂಧಪಟ್ಟದ್ದಾಗಿರುವುದಲ್ಲದೆ 'ರಾಷ್ಟ್ರದ' ಸ್ವರೂಪವನ್ನೂ ತಿಳಿಸುವುದು. ಅಕ್ಷರಶಃ ಈ ಸೂಕ್ತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯ ಅರ್ಥವನ್ನು ಪಾಲಿಸುವವನೇ ರಾಷ್ಟ್ರೋದ್ಧಾರಕನು. ರಾಷ್ಟ್ರೀಯ ಜೀವನ ಮತ್ತು ರಾಷ್ಟ್ರ ಸಂಪತ್ತಿನ ಮಹಿಮೆಯು ಇದರಿಂದ ಸೂಚಿತವಾಗುವುದು. ನಿಜ ಕರ್ತೋಪಾತ್ತವಾಗಿ ಲಭ್ಯವಾದ ವಿತ್ತದಿಂದ ಸಂತೃಪ್ತರಾಗಿರುವವರೇ ರಾಷ್ಟ್ರದ ಅಭ್ಯುದಯಕ್ಕೆ ಶ್ರಮಿಸುವ ಪ್ರಜೆಗಳು, ಶಶಿರೇಖಾಪರಿಣಯದ ಕಾಲದಲ್ಲಿ ಘಟೋತ್ಕಚನಿಂದ ವಂಚಿತರಾದ ಜನಗಳಂತೆ ಪರಕೀಯ ಯಂತ್ರೋಪಕರಣ, ಪರಕೀಯ ಭಾಷಾ ಪುಸ್ತಕ ಪಠನ, ಪರಕೀಯ ವೇಷಭೂಷಣಗಳಿಂದ ವಂಚಿತರಾಗುವುದಿಲ್ಲ. ಭಾರತಕ್ಕೆಲ್ಲಾ ಮೂಲವಾದ ಮಾತೃಭಾಷೆ ಸಂಸ್ಕೃತವನ್ನು ತಿಳಿಯದೆ, ತಿಳಿಯಲಾರದೆ ಪ್ರಾದೇಶಿಕ ಭಾಷಾ ಮೋಹದಿಂದ ಅದನ್ನು ದ್ವೇಷಿಸಿ ತಳ್ಳಿಹಾಕಿ ಪರಕೀಯ ಭಾಷೆಯಲ್ಲಿ ಆದರವನ್ನು ತೋರಿಸುವ ಭಾರತ ಪ್ರಜೆಗಳಿಗೆ ಸ್ವಕೀಯ ವಾಣಿಯೇ ಇಲ್ಲದೆ, ಪರಕೀಯ ಭಾಷೆಯು ಪರಕೀಯವಾಗಿಯೇ ದೂರ ಸರಿದು ನಿಂತಾಗ ಸ್ವರಾಜ್ಯಭಾರವು ಲಭಿಸಿದಂತಾಗುವುದು. ಸ್ವರಾಜ್ಯ ದ್ರೋಹ-ಕರ್ಮಕ್ಕೆ ಕ್ರೂರವಾದ ಫಲವು ಕಾದಿರುವುದು – ಎಂಬುದನ್ನು ರಾಜನೀತಿಯು ಘೋಷಿಸಿ ಎಚ್ಚರಿಸುತ್ತದೆ.

ಇಂದ್ರಿಯಗಳ ಮಿತಿಯಲ್ಲಿ ತೋರಿದಂತೆ ವರ್ತಿಸುವ ಸಾಮಾನ್ಯ ಜೀವರಾಶಿಗಳಂತಲ್ಲದೆ, ಬುದ್ಧಿಗೆ ಅವಕಾಶವಿರುವ ಪ್ರಜೆಗಳು ಇಂದ್ರಿಯಗಳ ಮೇಲೆ ನಿಯಂತ್ರಣವನ್ನು ಹೊಂದಿ ಸ್ವ ಮತ್ತು ಪರ ಹಿತ ಸಾಧನೆಯನ್ನು ತೋರಿಸುವ ರಾಜನೀತಿಯಿಂದ ತಮ್ಮ ತನ್ನ ಜನ್ಮಕ್ಕೆ ಕಾರಣವಾದ ಗೊತ್ತುವಳಿಯನ್ನೂ ಗುಣಕರ್ಮಶಕ್ತಿಗಳ ವಿಧಿಯನ್ನೂ ತಿಳಿದು, ಸರ್ವಾಂತರ್ಯಾಮಿಯ, ವಿಶ್ವದ ಮತ್ತು ಸುತ್ತಮುತ್ತಲಿನವರ ವಿಷಯಗಳಿಗೆ ಹೊಂದಿಕೊಂಡಂತೆ ತಮ್ಮ ಜೀವನ ವರ್ತನೆಯನ್ನು ಕ್ರಮಪಡಿಸಿಕೊಂಡು ಕೃತಕೃತ್ಯರಾಗಬೇಕು. ಇದಕ್ಕಾಗಿ ರಾಜನೀತಿ ಶಾಸ್ತ್ರಾಧ್ಯಯನ ಮತ್ತು ಕಲಾನುಸಂಧಾನ ತತ್ಪರರಾಗಿ ಸ್ವಯಂ ಶಿಕ್ಷಕರಾಗುವ ಅರ್ಹತೆಯನ್ನು ಪಡೆಯಬೇಕು. ಹೀಗೆ ಅರ್ಹತೆಯನ್ನು ಪಡೆದವನೇ ಮಾನವೀಯತೆಯ ಧೀರೋದಾತ್ತ ಮಾನವ ಪ್ರಜೆಗಳು.

ಜೀವನದಲ್ಲಿ ತಲೆದೋರುವ ಬೆಡಗು, ಆಡಂಬರಗಳನ್ನು ಧಿಕ್ಕರಿಸಿ ತಿರಸ್ಕರಿಸುವ ಈ ಉಪದೇಶವು ಶಾಲಿವಾಹನ ಶಕ 19-20 ನೇ ಶತಕಗಳಲ್ಲಿ ಜನತೆಗೆ ಸಂಜೀವನವಾಗಿರುವುದು. ಜೀವನದ ರಹಸ್ಯವನ್ನು ಬೋಧಿಸುವ ತತ್ವಶಾಸ್ತ್ರದ ಮೂಲವನ್ನು ದೂಲೀಕರಿಸಿರುವ ಜನಾಂಗಕ್ಕೆ 'ವಿದ್ಯೆ' 'ಸಂಸ್ಕೃತಿ' 'ಮಾನವೀ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯತೆ' ಗಳು ಅರ್ಥವಾಗುವುದಿಲ್ಲ.[1] ಇದನ್ನು ಸತ್ಯವೆಂದು ಪ್ರತಿವ್ಯಕ್ತಿಗೂ ಗೋಚರವಾಗಿದ್ದರೂ ಮೋಹದಿಂದ ರಾಜನೀತಿಯು ಮರೆಯಾಗಿ ಇನ್ನೂ ಕತ್ತಲೆಯಲ್ಲಿಯೇ ತಡವರಿಸುತ್ತಾ ಜೀವಿಸುವುದು ತಪ್ಪಿರುವುದಿಲ್ಲ. ಆದುದರಿಂದ ಸಾಮ್ರಾಜ್ಯತತ್ವಗಳ ಹಿನ್ನೆಲೆಯಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಸ್ವಾವಲಂಬನದ ನಿಜಕರ್ಮದಿಂದ ಜೀವನ ವೃತ್ತಿಯನ್ನು ನಡೆಸಬೇಕೆಂದೂ, ತನ್ನ ಮತ್ತು ತನ್ನ ಕೆಲಸ, ಜಾತಿಗಳ ಮಿತಿಯಲ್ಲಿ ದೊರೆತ ದ್ರವ್ಯದಿಂದ ತೃಪ್ತಿಯಾಗಿ ಮಿತವಾಗಿ ಜೀವಿಸಿ ಸುಖಪಡಬೇಕೆಂದೂ ದುರಾಸೆ ಅತಿಯಾಸೆಗಳನ್ನು ದೂರದಲ್ಲಿಟ್ಟು, 'ಪರಪ್ರತ್ಯಯ ನೇಯಬುದ್ಧಿ'ಯನ್ನು ತೊಲಗಿಸಿ ಗೋಧನ ತಪೋಧನಗಳಿಂದ ಮಾತ್ರ ಜಗತ್ತಿಗೆಲ್ಲಾ ನಾಯಕರಾಗುವ ಪದವಿಯನ್ನು ಅನುಭವಿಸಬಹುದಾದ ಅರ್ಹತೆಯನ್ನು ಹೊಂದಿ – ತಪೋಭೂಮಿ, ಬ್ರಾಹ್ಮಣದೇಶ ಭಾರತ ರಾಷ್ಟ್ರದ – ಪ್ರಜೆಗಳೆಲ್ಲರೂ ಹೊಂದುವುದಕ್ಕಾಗಿ ರಾಜನೀತಿ ಶಾಸ್ತ್ರರಚನೆ, ಅಧ್ಯಯನಗಳಿಗೆ ಕೂಡಲೆ ಸಜ್ಜುಗೊಳಿಸಬೇಕಾಗಿರುತ್ತದೆ.

ಪ್ರತಿ ಶರೀರದಲ್ಲಿಯೂ ಇರುವ ಅಂಗಗಳು, ಅವಯವಗಳು, ಇಂದ್ರಿಯಗಳು, ಮನಸ್ಸು ಮತ್ತು ಕ್ಷೇತ್ರಜ್ಞ ಎಲ್ಲವೂ ರಾಜ ಪ್ರಜಾ – ಪ್ರಜಾರಾಜ ಸಂಬಂಧಗಳಿಂದ ಸ್ವಕರ್ಮವನ್ನು ನಿರ್ವಹಿಸಿ ಶರೀರವನ್ನು ಆರೋಗ್ಯ-ಆನಂದ-ಸಮತೆ-ಯಲ್ಲಿ ಸಮನಾಗಿ ಸಮುದರ್ಶನಾನುಕೂಲವಾಗಿ ವರ್ತಿಸುವ ಪರಿಸ್ಥಿತಿಯು ನಿರ್ದಿಷ್ಟವಾಗಿರುತ್ತದೆ. ಹೀಗೆಯೇ ಒಂದು ಕುಟುಂಬದಲ್ಲಿರುವ ಪ್ರತಿಯೊಬ್ಬರೂ ರಾಜ ಗುಣ ಕರ್ಮ ಶಕ್ತಿಗಳನ್ನೂ ಮತ್ತು ಪ್ರಜಾ ಗುಣ ಕರ್ಮ ಶಕ್ತಿಗಳನ್ನೂ ಹೊಂದಿ ಸಮಯೋಚಿತವಾಗಿ ಕುಟುಂಬದ ಕಾರ್ಯವನ್ನು ಸಾಧಿಸುವರು. ಇಂತಹ ವ್ಯಕ್ತಿಗಳುಳ್ಳ ಕುಟುಂಬವಲ್ಲಿ ಹಿರಿಯರೂ ಅನುಭವಶಾಲಿಗಳೂ ಆದ ವ್ಯಕ್ತಿಯು ಕುಟುಂಬರಾಜ, ರಾಜ್ಞೀ – ಸಮ್ರಾಜ್ಞೀ – ಆಗಿಯೂ ಉಳಿದವರು ಪ್ರಜೆಗಳಾಗಿಯೂ ಇರುವರು. ಅನೇಕ ಕುಟುಂಬಗಳು ಪ್ರಜೆಗಳೆನಿಸಿ ಸೇರಿದ

1 ಡಾ॥ ಎಸ್. ರಾಯ್ ಹೇಳಿರುವಂತೆ ವಿದೇಶ ಭಾಷಾಪುಸ್ತಕ ಪಠನಕ್ಕಾಗಿ ಜನ್ಮವೆತ್ತಿ ದೇಶೀಯರನ್ನು ದೇಶೀಯ ಸಂಸ್ಕೃತಿ, ವಿದ್ಯೆಗಳಿಂದ ಬೇರ್ಪಡಿಸುವ ವಿಶ್ವವಿದ್ಯಾಲಯಗಳು ಜನತೆಗೆ ಕಾರಾಗೃಹ (prison) ವೇ ಸರಿ. ಇದರಿಂದ ಇನ್ನೂ ಬಿಡುಗಡೆಯಾಗದಿರುವುದು ರಾಷ್ಟ್ರ ದೇವತೆಯ ದೌರ್ಭಾಗ್ಯ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಮಾಜದಲ್ಲಿ, ಹಿರಿಯರಾದವರು ಒಂದು ಕುಟುಂಬದಿಂದ ಆರಿಸಲ್ಪಟ್ಟಂತೆ ಸಮುಯೋಚಿತವಾಗಿ ಅಧ್ಯಕ್ಷ ರಾಜರಾಗುತ್ತಾರೆ. ಒಂದು ಪ್ರದೇಶದಲ್ಲಿರುವ ವಿವಿಧ ಸಮಾಜ-ಜನಾಂಗಗಳು ಪ್ರಜೆಗಳಾಗಿ ಸೇರಿದಾಗ ಪ್ರಾದೇಶಿಕ ರಾಜಾಧ್ಯಕ್ಷರೊಬ್ಬರು ಒಂದು ಸಮಾಜ-ಜನಾಂಗ-ದಿಂದ ನಿರ್ದೇಶಿಸಲ್ಪಡುತ್ತಾರೆ ಪ್ರದೇಶಗಳೆಲ್ಲ ಒಟ್ಟುಗೂಡಿ ರಾಷ್ಟ್ರ-ದೇಶ-ದ ಹೆಸರಿನಲ್ಲಿ ಯೋಗಕ್ಷೇಮ ಕಾರ್ಯನಿರ್ವಾಹಕ್ಕಾಗಿ ಒಂದು ಪ್ರದೇಶದ ಮುಖಂಡರು ರಾಜ- ಆಗುವರು.

ಗುಣ ಕರ್ಮ ಶಕ್ತಿಗಳ ಮಿತಿ ಸೋಪಾನಗಳನ್ನು ಅನುಸರಿಸಿ ಅನೇಕ ಜನ ರಾಜಪುರುಷರು (ರಾಜ-ಪರವಾಗಿ) ವೈಯಕ್ತಿಕ, ಕುಟುಂಬ, ಸಮಾಜ ಪ್ರದೇಶ, ದೇಶ (ರಾಷ್ಟ್ರ) ಪ್ರಜೆಗಳ ಯೋಗಕ್ಷೇಮ ಪಾಲನೆಗೆ ತಕ್ಕ ಕಾರ್ಯ ನಿರ್ವಾಹ ಕ್ರಮಗಳನ್ನು ನಿಯಮಾನುಸಾರ ಗೊತ್ತುಮಾಡಿಕೊಂಡು ರಾಜ-ಪ್ರಜಾ ಸೇವಾಕಾರ್ಯಗಳನ್ನು ಸಾಧಿಸುವವರಾಗುವರು. ಮೇಲ್ಕಂಡ ಐದು ವಲಯಗಳಲ್ಲಿಯೂ ರಾಜಪ್ರಜೆಗಳ ಸಂಬಂಧದಲ್ಲಿ ರಾಜ್ಯ ಕಾರ್ಯಭಾರಗಳನ್ನು (ರಾಜ್ಯ=ರಾಜನ ಕರ್ಮ/ರಾಜನ ಭಾವ) ತತ್ವತಃ ಏಕ ಪ್ರಕಾರವಾಗಿ ಸಮಾನವಾಗಿಯೇ ಇರುವುವು.

ಪ್ರಕೃತ, ಈ ಕಾಲದಲ್ಲಿ ಸರ್ವರ ಗಮನಕ್ಕೆ ಬಂದು ಆಚರಣೆಯಲ್ಲಿರುವ ರಾಜ್ಯಕಾರ್ಯ ವಿಭಾಗಗಳಾದ ಭೂಮ್ಯಾದಾಯ, ಪಂಜೀಬಂಧ, ಆದಾಯ ತೆರಿಗೆ, ಪ್ರಜಾ ರಕ್ಷಣ, ದೇಶ ರಕ್ಷಣ, ಸೈನ್ಯ, ಅರಣ್ಯ, ಸಾರಿಗೆ, ವಿದ್ಯಾ, ಆರೋಗ್ಯ ಶುಚಿ, ವೈದ್ಯ, ಚಿಕಿತ್ಸಾ, ಭೂಸ್ಯವಸಾಯ, ಶಿಲ್ಪಕಲಾ, ವಾಣಿಜ್ಯ, ಉದ್ಯಮ, ಉಪವನ, ಗೃಹಾರಾಮ, ನ್ಯಾಯಾಂಗ, ಪರಸ್ಪರ ಸಹಾಯ, ವಾಹನಾದಿಗಳು, ಭಗವತ್ಸೇವಾ, ಆಹಾರ ಇತ್ಯಾದಿ ಸಾರ್ವಜನಿಕ ರಾಜಕಾರ್ಯಗಳು ಪ್ರತಿಯೊಂದು ದೇಹದಲ್ಲಿಯೂ ಪ್ರತಿ ಗೃಹ, ಪ್ರತಿಸಮಾಜ, ಪ್ರತಿಪ್ರದೇಶ-ರಾಷ್ಟ್ರಗಳಲ್ಲಿಯೂ ನಡೆಯುವವುಗಳಾಗಿವೆ.

ಸನ್ನಿವೇಶ ಪರಿಸ್ಥಿತಿಗಳಿಂದಲೂ, ವಾಯು ವೃಷ್ಟಿಗಳಿಂದಲೂ ಸೂರ್ಯ ತಾಪಾಂಶಗಳಿಂದಲೂ, ನ್ಯೂನತಾತಿರೇಕಗಳಿಗೊಳಗಾದ ಆಹಾರ, ವಿಹಾರ ಗಳಿಂದಲೂ ದೇಹದ ಮತ್ತು ಮನಸ್ಸಿನ ಆರೋಗ್ಯ ಸ್ಥಿತಿಗತಿಗಳು ಉಲ್ಲೋಲ ಕಲ್ಲೋಲವಾಗುವಂತೆ ಪ್ರತಿಯೊಂದು ರಾಜ್ಯವಲಯವೂ ಪ್ರಕ್ಷುಬ್ಧವಾಗುವುದೂ ಪ್ರಕ್ಷುಬ್ಧವಾಗುತ್ತಿರುವುದೂ ಅನುಭವಕ್ಕೆ ಬಂದಿರುವುದು. ಇಂತಹ ಸಂದರ್ಭ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಳಲ್ಲಿ ಈ ಕೆಳಗೆ ಕಂಡ ಕಾರ್ಯಕ್ರಮಗಳಿಂದ ರಾಜ್ಯಭಾರವು ನ್ಯೂನತಾತಿರೇಕ ಗಳಿಗೆ ಅವಕಾಶವಿಲ್ಲದಂತೆ ನಿರ್ವಾಹವಾಗಬೇಕಾಗಿರುತ್ತದೆ. ಸಾಮದಾನಭೇದ ದಂಡಗಳೆಂಬ ಉಪಾಯಗಳು; ಮೈತ್ರೀ, ಮಿತ್ರಭೇದ, ಸಂಧಿ, ವಿಗ್ರಹ(ಯಾನ) ಆಸರೀಕ್ಷ್ಯ ಕಾರಿತ್ವಗಳೆಂಬ ಪಂಚತಂತ್ರಗಳು ; ಬ್ರಹ್ಮಾಂಡ ಪಿಂಡಾಂಡಗಳನ್ನು ವ್ಯಾಪಿಸಿ ಜಗದಾಧಾರವಾದ ರವಿ, ಶಶಿ, ಕುಜ, ಬುಧ, ಗುರು, ಶುಕ್ರ. ಶನಿ, ರಾಹು, ಕೇತುಗಳು ಮತ್ತು ಸಪ್ತರ್ಷಿ, ಧ್ರುವ, ಆಶ್ವಿನ್ಯಾದಿ ನಕ್ಷತ್ರ ಮಂಡಲ ಗಳ ಜ್ಯೋತಿಷ್ಕತ್ವಗಳ ನ್ಯೂನತಾತಿರೇಕ ಸಂಬಂಧ ವ್ಯಾಪಾರಗಳ ವೈಷಮ್ಯ ಗಳನ್ನು ಹೋಗಲಾಡಿಸಿ ಬ್ರಹ್ಮಾಂಡ ಮತ್ತು ಪಿಂಡಾಂಡಗಳಲ್ಲಿ ಸಮಸ್ಥಿತಿಯ ನ್ನುಂಟುಮಾಡುವ ಶಾಸ್ತ್ರೀಯ ಕಾರ್ಯಗಳು; ದುಷ್ಟ ನಿಗ್ರಹ, ಶಿಷ್ಟ ಪರಿಪಾಲನೆ ಗಳ ಮೂಲಕ ರಾಜ್ಯವಲಯಗಳ ರಾಜನೀತಿಗೆ ಅವಶ್ಯಕವಾದ, ಪ್ರತಿ ವ್ಯಕ್ತಿಯಲ್ಲಿ ಯೂ ಅವಶ್ಯಕವಾಗಿರಬೇಕಾದ ಇಂದ್ರತ್ವ, ಅಗ್ನಿತ್ವ. ಯಮತ್ವ. ನಿರಋತಿತ್ವ, ವರುಣತ್ವ, ವಾಯುತ್ವ, ಕುಬೇರತ್ವ, ಈಶಾನತ್ವಗಳೆಂಬ ಅಧಿಕಾರಗಳ ಗುಣ ಕರ್ಮಶಕ್ತಿಗಳು; ಅದಿತಿ. ದಿತಿ, ದ್ಯೌಃ, ಭೂಮಿತತ್ವಗಳ ಲೋಪದೋಷನಿವಾ ರಕಕರ್ತವ್ಯ, ಕರ್ಮನಿಷ್ಠೆ ; ಅಧಿಷ್ಠಾನತ್ವ, ಆತ್ಮತ್ವ, ಉಪಾದಾನತ್ವ, ವಿವೃತತ್ವ, ನಿವೃತತ್ವ, ನಿರುಪಾಧಿಕತ್ವಗಳೆಂಬ ಆರು ಶಕ್ತಿಗಳು; ಅಗ್ನಿಷೋ ಮೀಯ ಶಕ್ತಿಗಳು : ಸಾತ್ವಿಕವಾದ ರುದ್ರಶಕ್ತಿ, ರಾಜಸವಾದ ವಿಷ್ಣುಶಕ್ತಿ, ತಾಮಸವಾದ ಬ್ರಹ್ಮಶಕ್ತಿಗಳ[1] ಸರ್ವವ್ಯಾಪಕತೆಯನ್ನು ತಿಳಿದು 5 ವಲಯ ರಾಜ್ಯಭಾರಕ್ಕೆ ಅವಕಾಶವಾಗುವ ಸಮಸ್ಥಿತಿಯಲ್ಲಿ ವ್ಯವಸ್ಥೆ ಮಾಡುವುದು. ಈ ಅನಂತವಾದ ಶಕ್ತಿಗಳ ಸಮಷ್ಟಿರೂಪವಾದ ಸರ್ವಶಕ್ತಿಯಿಂದ ಶಾಸ್ತ್ರೋಕ್ತಕ್ರಮ ಗಳಲ್ಲಿ ಅನುಷ್ಠಾನ ಮಾಡಿದ ಶ್ರೋತ್ರಿಯತ್ವ, ಕ್ಷತ್ರಿಯತ್ವ, ವೈಶ್ಯತ್ವ, ಶೂದ್ರತ್ವ, ನಿಷಾದತ್ವ ಗಳೆಂಬ ಗುಣ ಕರ್ಮ ಶಕ್ತಿಗಳಿಂ[2] ನಿತಿ, ನಿಷ್ಠೆ, ನಿಷ್ಠು ಷ್ಟತೆಗಳಿಂದ ರಾಜನೀತಿ, ಶಾಂತಿ, ಸಮಾಧಾನಗಳನ್ನೂ ರಾಷ್ಟ್ರದ ಯೋಗಕ್ಷೇಮ

1 ಭರದ್ವಾಜಕೃತ ಅಂಶುಬೋಧಿನೀ

2 ಇದರ ಮರ್ಮವು ಸ್ವಧರ್ಮ ವಿವೇಕ, ಶೂದ್ರಮಿಮಾಂಸಾ ಗ್ರಂಥಗಳಲ್ಲಿ ಸರ್ವ ಸಮನ್ವಯ, ಸಾಮ್ರಾಜ್ಯತತ್ವಗರ್ಭಿತ ರಾಜನೀತಿ ಕ್ರಮಗಳಲ್ಲಿ ವಿಸ್ತಾರವಾಗಿ ಹೇಳಲ್ಪಟ್ಟಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪನ್ನೂ ಸಾಧಿಸಬೇಕಾಗುತ್ತದೆ. ಇದಕ್ಕಾಗಿ ಭಗವಾ ಶ್ರೀಕೃಷ್ಣ, ಮಹರ್ಷಿ ಚಾಣಕ್ಯ, ವಿದ್ಯಾರಣ್ಯ ಬ್ರಹ್ಮರ್ಷಿಗಳೇ ಮೊದಲಾದ ಮಹಾತ್ಮರ, ಶ್ರೀ ರಾಮಕೃಷ್ಣ ಪರಮಹಂಸ ಗುರುಭಕ್ತರಾದ ವಿವೇಕಾನಂದ. ಭುವನೇಶ್ವರೀ ಅನುಗ್ರಹಕ್ಕೆ ಪಾತ್ರರಾದ ಶಿವಾಜಿ ಮೊದಲಾದ ರಾಷ್ಟ್ರವೀರರ ಪಾತ್ರಗಳು ಮತ್ತು ಮಹಿಮಗಳು ಸ್ವಕೀಯ ಆಡಳಿತದ ಬಾಲ್ಯಾವಸ್ಥೆಯಲ್ಲಿರುವ ಭಾರತೀಯರಿಗೆ ಪ್ರಜ್ಞೋದಕಗಳೂ ಮಾರ್ಗ ನಿದರ್ಶನಗಳೂ ಸಿದ್ಧಿಪ್ರಾಪಕಗಳೂ ಆಗಿರುವುವು.

ತತ್ವಶಾಸ್ತ್ರಾಮೃತ ಮಂಥನದಿಂದ ವಿಭೂತಿ ಪುರುಷರೂ ರಾಷ್ಟ್ರ ಸಂಸ್ಕೃತಿಯನ್ನು ಸಂರಕ್ಷಿಸಿದವರೂ ಆದ ಆಚಾರ್ಯರು ರಾಷ್ಟ್ರ-ವಿಶ್ವ-ರಾಜನೀತಿಯ ಪ್ರೇರಣೆಯಿಂದ ಎಂಬಂತೆ ಜನ ಮನದ ವಿಷಮಸ್ಥಿತಿಯನ್ನು ಕಾಲಾನುಗುಣವಾಗಿ ಹೋಗಲಾಡಿಸಿ ವಿರೋಧ ಪರ್ವತನೆಗಳನ್ನು ತಡೆಗಟ್ಟಿ ಜನತೆಯ ಮನೋಧರ್ಮ ಮತ್ತು ನಡೆವಳಿಕೆಗಳನ್ನು ರೂಪಿಸಿ ಪರಿಷ್ಕರಿಸುತ್ತಾರೆ.

ಆಯಾ ಕಾಲ, ದೇಶ, ಪಾತ್ರಾನುಗುಣವಾಗಿ ಅತ್ಯವಶ್ಯಕವಾಗಿ ವಿರಾಟ್ ಪುರುಷನ ಋತ-ಕ್ಷತ್ರ ವ್ಯವಸ್ಥೆಯ ಪ್ರಕಾರ ನಡೆಯಬೇಕಾಗಿದ್ದ ಸಮನ್ವಯ ವಿಚಾರಗಳನ್ನು ಅನಂದದಾಯಕವಾದ 'ಸಮತೆ'ಯ ರಾಜನೀತಿಯಿಂದ ಗ್ರಹಿಸಬೇಕಾಗಿದೆ. ಬ್ರಹ್ಮ-ಕ್ಷತ್ರಗಳನ್ನು ಲಕ್ಷ್ಯವಾಗಿಟ್ಟುಕೊಂಡು, ರಾಷ್ಟ್ರಕ್ಕೆ ಮೂಲ ಭೂತವಾದ ಸಂಸ್ಕೃತಿ ಆಚಾರ ವ್ಯವಹಾರಗಳನ್ನು ಯಥೋಚಿತವಾಗಿ ಅನುಷ್ಠಾನದಲ್ಲಿಟ್ಟುಕೊಂಡು ತದ್ವಿರುದ್ಧವಾದ ವಿಷಮ ಸ್ಥಿತಿಗಳನ್ನು ಎದುರಿಸುವ ಕರ್ತವ್ಯದಲ್ಲಿ ಸರ್ವ ಪ್ರಯತ್ನಗಳನ್ನು ನಡೆಸಲು ಶಕ ಪುರುಷವೀರರಂತೆ ರಾಜನೀತಿಯನ್ನು ಆಳವಡಿಸಿಕೊಂಡು ಸಮತ್ವವನ್ನು ಸ್ಥಾಪಿಸುವುದೇ ಪ್ರತಿಯೊಬ್ಬ ಪ್ರಜೆಯು ಅನುಸರಿಸಬೇಕಾದ ಸರ್ವ ಸಮನ್ವಯ ತತ್ವವಾಗಿರುತ್ತದೆ. ಇದಕ್ಕಾಗಿಯೇ ಪ್ರಜಾಸಾಮ್ರಾಜ್ಯಂ ಸಂಸ್ಥೆಯು ರಾಜ ಪ್ರಜೆಗಳ ಅಥವಾ ಪ್ರಜಾ ರಾಜರ ಹಿತಕ್ಕಾಗಿ ಸಾಮ್ರಾಜ್ಯತತ್ವಗರ್ಭಿತವಾದ ರಾಜನೀತಿಯ ಅಧ್ಯಯನ ಶಿಕ್ಷಣಾದಿಗಳಿಗೆ ಯತ್ನ ಮಾಡುವುದಾಗಿರುತ್ತದೆ. ಈ ಸಮನ್ವಯ (ವ್ಯವಸ್ಥೆ) ವನ್ನು ಸದುಪಯೋಗಿಸಿಕೊಂಡು ಭಾರತೀಯರೆಲ್ಲರೂ ಐಕಮತ್ಯದಿಂದ ರಾಷ್ಟ್ರೈಕ್ಯವನ್ನು ಸಾಧಿಸಿ ರಾಷ್ಟ್ರೋನ್ನತಿಯ ದೃಷ್ಟಿಯಿಂದ ತಮ್ಮ ತಮ್ಮ ಜೀವನದ ಪ್ರತಿಯೊಂದು ಹಂತ (ಘಟ್ಟ) ದಲ್ಲಿಯೂ ರಾಜನೀತಿಯ ಸೂಕ್ತಿಗಳನ್ನು ಪರಿಪಾಲಿಸುವ ರಾಜರಾಗುವಂತೆ ರಾಷ್ಟ್ರದ ಭಾಗ್ಯದೇವತೆಯನ್ನು ಪ್ರಾರ್ಥಿಸಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಾಷ್ಟ್ರದ ಭೂ ಪ್ರದೇಶಗಳನ್ನು ಪ್ರತಿ ವ್ಯಕ್ತಿಯೂ ತನ್ನ ತನ್ನ ದೇಹದಲ್ಲಿ ಅಡಗಿರುವಂತೆ ದೇಹದ ಅವಯವಗಳಿಗೆ ಆಯಾ ಪ್ರದೇಶದ ಹೆಸರನ್ನು ಕೊಟ್ಟು ರಾಷ್ಟ್ರವೂ ತನ್ನ ದೇಹವೂ ಐಕ್ಯವೆಂದು ಭಾವಿಸಿ ದ್ವೇಷಾಸೂಯಾದಿ ಭಾವನೆಗಳನ್ನು ತೊರೆದು ಜನ್ಮ ಸಾರ್ಥಕವಾಗುವ ಕರ್ತವ್ಯಗಳನ್ನು ನೆರವೇರಿಸಬೇಕು. ಬೃಹಸ್ಪತಿತ್ವ ಗುಣ ಕರ್ಮ ಶಕ್ತಿಗಳಿಂದ ತುಂಬಿರುವುದರಿಂದ ಬೃಹಸ್ಪತಿಯೆಂತಲೂ, ಶುಕ್ರತ್ವ ಗುಣ ಕರ್ಮ ಶಕ್ತಿಗಳಿಂದ ತುಂಬಿರುವುದರಿಂದ ಶುಕ್ರನೆಂತಲೂ ಕರೆಯಲ್ಪಡುವವರು ಈ ಪಾಠವನ್ನು ಬೋಧಿಸಲು ಅರ್ಹರಾಗಿರುತ್ತಾರೆ. ಈ ಗುರು ಶುಕ್ರ ಗುಣ ಕರ್ಮ ಶಕ್ತಿಗಳು ಬೇರೆ ಬೇರೆಯಾಗಿಯೂ ಪಿಂಡ್ರವಾಗಿಯೂ ಪ್ರತಿ ಶರೀರದಲ್ಲಿಯೂ ಇದ್ದು ಸಮಯೋಚಿತವಾಗಿ ಮನಸ್ಸು ಆಯಾ ಪಾತ್ರವನ್ನು ಧರಿಸಿ ಕಾರ್ಯನಿರ್ವಾಹ ಮಾಡುವುದು. (ಈ ವಿವರಗಳು ಕಾಲ, ಕರ್ಮ, ಅಮೃತ ಸುಂಥನವೆಂಬ ಶೀರ್ಷಿಕೆಯ ಲೇಖನದಲ್ಲಿ– ಶ್ರೀ ಬಿ. ವಿ. ರಾಮನ್ಸ್ ರವರ ಅಸ್ಟ್ರಾಲಾಜಿಕಲ್ ಮ್ಯಾಗ್ಜೈನ್, ಪುಟ 779–782; 850–860. ವಿಸ್ತಾರವಾಗಿ ಬರೆಯಲ್ಪಟ್ಟಿದೆ)

ಪ್ರಜೆಗಳು ರಾಜನೀತಿಜ್ಞರಾಗಿ ರಾಜ್ಯಯಜ್ಞವೆಂಬ ರಾಜಸೂಯ ಯಜ್ಞವನ್ನು ನಿರ್ವಹಿಸುವವರಾಗುವಂತೆ ರಾಷ್ಟ್ರ ಭಾಗ್ಯದೇವತೆಯು ಅನುಗ್ರಹಿಸಲಿ.

ಇತಿ ಶಮ್ ॥

निदेशक कार्यालय,
गुरुकुल कांगड़ी विश्वविद्यालय,
जिला सहारनपुर (उ० प्र०)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬೆಲೆ : ೬೦ ಪೈಸೆ
ಸದಸ್ಯರಿಗೆ ಪ್ರತ್ಯೇಕ

ಸಾಮ್ರಾಜ್ಯಂ ವೈದ್ಯುತ ಮುದ್ರಣಾಲಯ,
1403 ಸೊಪ್ಪಿನ ಕೊಳ ಮೈಸೂರು-4

CC-0. In Public Domain. Gurukul Kangri Collection, Haridwar